# ಜಿಎಸ್‌ಟಿ ಅಡಿಯಲ್ಲಿ ಇ–ವೇ ಬಿಲ್ ಅಧಿನಿಯಮದಲ್ಲಿನ ಉಪಬಂಧಗಳು

## ಅಧ್ಯಾಯ–XIV

## ತಪಾಸಣೆ, ಶೋಧನೆ, ವಶಕ್ಕೆ ತೆಗೆದುಕೊಳ್ಳುವುದು ಮತ್ತು ಬಂಧನ

68. **ಸಾಗಾಣಿಕೆಯಲ್ಲಿರುವ ಸರಕುಗಳ ಪರಿಶೀಲನೆ:–** (1) ಸರ್ಕಾರವು, ನಿರ್ದಿಷ್ಟಪಡಿಸಬಹುದಾದ ಅಂಥ ಮೊತ್ತವನ್ನು ಮೀರಿದ ಮೌಲ್ಯದ, ಯಾವುದೇ ರವಾನೆಯಲ್ಲಿರುವ ಸರಕುಗಳನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರ ವ್ಯಕ್ತಿಯನ್ನು, ನಿಯಮಿಸಬಹುದಾದ ಅಂಥ ದಸ್ತಾವೇಜುಗಳನ್ನು ಮತ್ತು ಅಂಥ ಸಾಧನಗಳನ್ನು ಅವನ ಜೊತೆಯಲ್ಲಿ ಒಯ್ಯುವಂತೆ ಅಗತ್ಯಪಡಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಒಯ್ಯುವುದು ಅಗತ್ಯವಿರುವ ದಸ್ತಾವೇಜುಗಳಲ್ಲಿನ ವಿವರಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸಿಂಧುಗೊಳಿಸತಕ್ಕದ್ದು.

(3) ಯುಕ್ತ ಅಧಿಕಾರಿಯು ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಯಾವುದೇ ಸಾಗಾಣಿಕೆ ವಾಹನವನ್ನು, ಯಾವುದೇ ಸ್ಥಳದಲ್ಲಿ ತಡೆದಲ್ಲಿ, ಸದರಿ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಜುಗಳು ಮತ್ತು ಸಾಧನಗಳನ್ನು ಪರಿಶೀಲನೆಗಾಗಿ ಹಾಜರುಪಡಿಸುವಂತೆ ಸದರಿ ಸಾಗಾಣಿಕೆ ವಾಹನದ ಪ್ರಭಾರ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಹಾಗೂ ಸದರಿ ವ್ಯಕ್ತಿಯು ದಸ್ತಾವೇಜುಗಳು ಮತ್ತು ಸಾಧನಗಳನ್ನು ಹಾಜರುಪಡಿಸಲು ಬಾಧ್ಯನಿರತಕ್ಕದ್ದು ಮತ್ತು ಸರಕುಗಳ ತಪಾಸಣೆಗೂ ಸಹ ಅವಕಾಶ ನೀಡತಕ್ಕದ್ದು.

## ಇ-ವೇ ಬಿಲ್‌ನ ಉಲ್ಲಂಘನೆಗೆ ಸಂಬಂಧಿಸಿದ ಅಪರಾಧಕ್ಕಾಗಿ ದಂಡದ ಉಪಬಂಧಗಳು

**125. ಸಾಮಾನ್ಯ ದಂಡ:–** ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು, ಅದಕ್ಕಾಗಿ ಈ ಅಧಿನಿಯಮದಲ್ಲಿ ದಂಡವನ್ನು ಪ್ರತ್ಯೇಕವಾಗಿ ಉಪಬಂಧಿಸಿರದಿದ್ದಲ್ಲಿ, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಬಾಧ್ಯನಿರತಕ್ಕದ್ದು;

**129. ಸಾಗಾಣಿಕೆಯಲ್ಲಿರುವ ಸರಕುಗಳು ಮತ್ತು ಸಾಗಾಣಿಕೆಯ ವಾಹನಗಳ ತಡೆಹಿಡಿಯುವಿಕೆ, ವಶಕ್ಕೆ ತೆಗೆದುಕೊಳ್ಳುವಿಕೆ ಹಾಗೂ ಬಿಡುಗಡೆ.–** (1) ಈ ಅಧಿನಿಯಮದಲ್ಲಿ

ಒಳಗೊಂಡಿರುವುದು ಏನೇ ಇದ್ದರೂ, ಯಾವುದೇ ವ್ಯಕ್ತಿ, ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸರಕುಗಳನ್ನು ಸಾಗಾಣಿಕೆ ಮಾಡಿದಲ್ಲಿ ಅಥವಾ ಯಾವುದೇ ಸರಕುಗಳನ್ನು ಸಾಗಣೆಯಲ್ಲಿರುವಾಗ ದಾಸ್ತಾನು ಮಾಡಿದಲ್ಲಿ, ಅಂಥ ಎಲ್ಲಾ ಸರಕುಗಳು ಮತ್ತು ಸದರಿ ಸರಕುಗಳನ್ನು ಸಾಗಿಸಲು ಸಂಚಾರದ ಸಾಧನವಾಗಿ ಬಳಸಿದ ಸಾಗಾಣಿಕೆಯ ವಾಹನ ಮತ್ತು ಅಂಥ ಸರಕುಗಳು ಹಾಗೂ ಸಾಗಾಣಿಕೆಯ ವಾಹನಕ್ಕೆ ಸಂಬಂಧಿಸಿದ ದಸ್ತಾವೇಜುಗಳು, ತಡೆಹಿಡಿಯುವಿಕೆಗೆ ಅಥವಾ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಬಾಧ್ಯವಾಗತಕ್ಕದ್ದು ಮತ್ತು ತಡೆಹಿಡಿಯುವಿಕೆ ಅಥವಾ ವಶಕ್ಕೆ ತೆಗೆದುಕೊಂಡ ನಂತರ.–

(ಎ) ಸರಕುಗಳ ಮಾಲೀಕನು ಅಂಥ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡಲು ಮುಂದೆ ಬಂದಲ್ಲಿ, ಅಂಥ ಸರಕುಗಳ ಮೇಲೆ ಅನ್ವಯವಾಗುವ ತೆರಿಗೆ ಮತ್ತು ಸಂದಾಯ ಮಾಡಬೇಕಾದ ತೆರಿಗೆಯ ಶೇಕಡ ನೂರರಷ್ಟಕ್ಕೆ ಸಮನಾದ ದಂಡ ಸಂದಾಯವಾದ ಮೇಲೆ ಮತ್ತು ವಿನಾಯತಿ ಸರಕುಗಳ ಸಂದರ್ಭದಲ್ಲಿ ಸರಕುಗಳ ಮೌಲ್ಯದ ಶೇಕಡ ಎರಡರಷ್ಟಕ್ಕೆ ಸಮನಾದ ಒಂದು ಮೊತ್ತ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಂದಾಯ ಮಾಡಿದ ಮೇಲೆ;

(ಬಿ) ಸರಕುಗಳ ಮಾಲೀಕನು ಅಂಥ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡಲು ಮುಂದೆ ಬರದಿದ್ದಲ್ಲಿ, ಅನ್ವಯವಾಗುವ ತೆರಿಗೆ ಮತ್ತು ಅದರ ಮೇಲೆ ಸಂದಾಯ ಮಾಡಿದ ತೆರಿಗೆಯ ಮೊತ್ತವನ್ನು ಇಳಿಕೆ ಮಾಡಿದ ಸರಕುಗಳ ಮೌಲ್ಯದ ಶೇಕಡಾ ಐವತ್ತರಷ್ಟಕ್ಕೆ ಸಮನಾದ ದಂಡ ಸಂದಾಯವಾದ ಮೇಲೆ ಮತ್ತು ವಿನಾಯತಿ ಸರಕುಗಳ ಸಂದರ್ಭದಲ್ಲಿ ಸರಕುಗಳ ಮೌಲ್ಯದ ಶೇಕಡ ಐದರಷ್ಟಕ್ಕೆ ಸಮನಾದ ಒಂದು ಮೊತ್ತ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಂದಾಯ ಮಾಡಿದ ಮೇಲೆ;

(ಸಿ) ಖಂಡ (ಎ) ಅಥವಾ ಖಂಡ (ಬಿ) ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತಕ್ಕೆ ಸಮನಾದ ಒಂದು ಭದ್ರತೆಯನ್ನು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸಿದ ಮೇಲೆ,

–ಬಿಡುಗಡೆಗೊಳಿಸತಕ್ಕದ್ದು:

**ಪರಂತು,** ಸರಕುಗಳನ್ನು ಸಾಗಾಣಿಕೆ ಮಾಡುತ್ತಿರುವ ವ್ಯಕ್ತಿಗೆ ತಡೆಹಿಡಿಯುವಿಕೆಯ ಅಥವಾ ವಶಕ್ಕೆ ತೆಗೆದುಕೊಳ್ಳುವುದರ ಒಂದು ಆದೇಶವನ್ನು ಜಾರಿಗೊಳಿಸದೆ ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನವನ್ನು ತಡೆಹಿಡಿಯುವುದು ಅಥವಾ ವಶಕ್ಕೆ ತೆಗೆದುಕೊಳ್ಳುವುದನ್ನು ಮಾಡತಕ್ಕದ್ದಲ್ಲ.

(2) ಸರಕುಗಳ ಅಥವಾ ಸಾಗಾಣಿಕೆ ವಾಹನದ ತಡೆಹಿಡಿಯುವಿಕೆಗಾಗಿ ಮತ್ತು ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ ಪ್ರಕರಣ 67ರ ಉಪಪ್ರಕರಣ (6)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(3) ಸರಕುಗಳು ಅಥವಾ ಸಾಗಾಣಿಕೆ ವಾಹನಗಳನ್ನು ತಡೆಹಿಡಿದಿರುವ ಅಥವಾ ವಶಕ್ಕೆ ತೆಗೆದುಕೊಂಡಿರುವ ಯುಕ್ತ ಅಧಿಕಾರಿಯು, ಸಂದಾಯ ಮಾಡಬೇಕಾದ ತೆರಿಗೆಯನ್ನು ಮತ್ತು ದಂಡವನ್ನು ನಿರ್ದಿಷ್ಟಪಡಿಸಿ ಒಂದು ಸೂಚನಾಪತ್ರವನ್ನು ನೀಡತಕ್ಕದ್ದು, ತದನಂತರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ)ಯ ಅಡಿಯಲ್ಲಿ ತೆರಿಗೆ ಮತ್ತು ದಂಡವನ್ನು ಸಂದಾಯ ಮಾಡುವುದಕ್ಕಾಗಿ ಆದೇಶವನ್ನು ಹೊರಡಿಸತಕ್ಕದ್ದು.

(4) ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು ಉಪಪ್ರಕರಣ (3)ರ ಅಡಿಯಲ್ಲಿ ತೆರಿಗೆ, ಬಡ್ಡಿ ಅಥವಾ ದಂಡವನ್ನು ನಿರ್ಧರಿಸತಕ್ಕದ್ದಲ್ಲ.

(5) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಮೊತ್ತವು ಸಂದಾಯವಾದ ಮೇಲೆ, ಉಪಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿದ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ನಡಾವಳಿಗಳು ಮುಕ್ತಾಯವಾಗಿವೆ ಎಂದು ಪರಿಭಾವಿಸತಕ್ಕದ್ದು.

(6) ಯಾವುದೇ ಸರಕುಗಳನ್ನು ಸಾಗಾಣಿಕೆ ಮಾಡುತ್ತಿರುವ ವ್ಯಕ್ತಿ ಅಥವಾ ಸರಕುಗಳ ಮಾಲೀಕನು ಉಪಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ತೆರಿಗೆ ಮತ್ತು ದಂಡದ ಮೊತ್ತವನ್ನು, ಅಂಥ ತಡೆಹಿಡಿಯುವಿಕೆಯ ಅಥವಾ ವಶಕ್ಕೆ ತೆಗೆದುಕೊಂಡ ಏಳು ದಿನಗಳ ಒಳಗಾಗಿ ಸಂದಾಯ ಮಾಡಲು ವಿಫಲನಾದಲ್ಲಿ, ಪ್ರಕರಣ 130ರ ಉಪಬಂದಗಳಿಗೆ ಅನುಸಾರವಾಗಿ ಮುಂದುವರೆದ ನಡಾವಳಿಗಳನ್ನು ಪ್ರಾರಂಭಿಸತಕ್ಕದ್ದು:

**ಪರಂತು,** ತಡೆಹಿಡಿದ ಅಥವಾ ವಶಕ್ಕೆ ತೆಗೆದುಕೊಂಡ ಸರಕುಗಳು, ನಶಿಸಿಹೋಗುವ ಅಥವಾ ಗಂಡಾಂತರಕಾರಿ ಸ್ವರೂಪದಲ್ಲಿದ್ದಲ್ಲಿ, ಅಥವಾ ಕಾಲಾಂತರದಲ್ಲಿ ಮೌಲ್ಯದಲ್ಲಿ ಸವಕಳಿಯಾಗುವ ಸಂಭವವಿದ್ದಲ್ಲಿ, ಸದರಿ ಏಳು ದಿನಗಳ ಅವಧಿಯನ್ನು ಯುಕ್ತ ಅಧಿಕಾರಿಯಿಂದ ಇಳಿಕೆ ಮಾಡಬಹುದು.

**130. ಸರಕುಗಳು ಅಥವಾ ಸಾಗಾಣಿಕೆ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ದಂಡ ವಿಧಿಸುವುದು.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ವ್ಯಕ್ತಿಯು–

(i) ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಯಾವುದೇ ಉಪಬಂಧಗಳು, ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸರಕುಗಳನ್ನು ಪೂರೈಕೆ ಮಾಡಿದರೆ ಅಥವಾ ಸ್ವೀಕರಿಸಿದರೆ; ಅಥವಾ

(ii) ಈ ಅಧಿನಿಯಮದ ಅಡಿಯಲ್ಲಿ ಅವನು ತೆರಿಗೆ ಸಂದಾಯ ಮಾಡಲು ಬಾಧ್ಯನಿರುವ ಯಾವುದೇ ಸರಕುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲದಿದ್ದರೆ; ಅಥವಾ

(iii) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗುವ ಯಾವುದೇ ಸರಕುಗಳನ್ನು ನೋಂದಣಿಗೆ ಅರ್ಜಿ ಸಲ್ಲಿಸದೇ ಪೂರೈಕೆ ಮಾಡಿದರೆ; ಅಥವಾ

(iv) ತೆರಿಗೆಯ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ, ಈ ಅಧಿನಿಯಮದ ಯಾವುದೇ ಉಪಬಂಧಗಳು, ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿದರೆ; ಅಥವಾ

(v) ಸ್ವತ: ಸಾಗಾಣಿಕೆ ವಾಹನದ ಮಾಲೀಕನ, ಅವನ ಏಜೆಂಟು ಯಾರಾದರೂ ಇದ್ದರೆ ಆತನ, ಮತ್ತು ಆ ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯ ಗಮನಕ್ಕೆ ಬಾರದೇ ಅಥವಾ ಪರೋಕ್ಷ ಸಮ್ಮತಿಯಿಲ್ಲದೆ, ಅದನ್ನು ಉಪಯೋಗಿಸಲಾಗಿದೆ ಎಂದು ಸಾಗಾಣಿಕೆ ವಾಹನದ ಮಾಲೀಕನು ಸಾಬೀತುಪಡಿಸಿದ ಹೊರತಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳು, ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿ ಸಂಚಾರದ ಸಾಧನವಾಗಿ ಯಾವುದೇ ಸಾಗಾಣಿಕೆ ವಾಹನವನ್ನು ತೆರಿಗೆದಾಯಕ ಸರಕುಗಳನ್ನು ಸಾಗಿಸಲು ಉಪಯೋಗಿಸಿದರೆ,

–ಆಗ, ಎಲ್ಲಾ ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನಗಳು ಮುಟ್ಟುಗೋಲಿಗೆ ಬಾಧ್ಯವಾಗತಕ್ಕದ್ದು ಮತ್ತು ಆ ವ್ಯಕ್ತಿಯು ಪ್ರಕರಣ 122ರ ಅಡಿಯಲ್ಲಿ ದಂಡಕ್ಕೆ ಬಾಧ್ಯನಿರತಕ್ಕದ್ದು.

(2) ಯಾವುದೇ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲು ಈ ಅಧಿನಿಯಮದ ಮೂಲಕ ಯಾವುದೇ ಸಂದರ್ಭದಲ್ಲಿ ಪ್ರಾಧಿಕೃತಗೊಂಡಾಗ, ಇದನ್ನು ನಿರ್ಣಯಿಸುವ ಅಧಿಕಾರಿಯು, ಸರಕುಗಳ ಮಾಲೀಕನಿಗೆ, ಮುಟ್ಟುಗೋಲಿಗೆ ಬದಲಾಗಿ, ಸದರಿ ಅಧಿಕಾರಿಯು ಸೂಕ್ತವೆಂದು ಯೋಚಿಸುವ ಅಂಥ ಜುಲ್ಮಾನೆಯನ್ನು ಸಂದಾಯ ಮಾಡುವ ಆಯ್ಕೆಯನ್ನು ನೀಡತಕ್ಕದ್ದು:

ಪರಂತು ಅಂಥ ಜುಲ್ಮಾನೆ, ಅದರ ಮೇಲೆ ವಿಧಿಸಬಹುದಾದ ತೆರಿಗೆಯನ್ನು ಕಳೆದ ಮುಟ್ಟುಗೋಲು ಹಾಕಿಕೊಳ್ಳಲಾದ ಸರಕುಗಳ ಮಾರುಕಟ್ಟೆಯ ಮೌಲ್ಯವನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ವಿಧಿಸಬಹುದಾದ ಅಂಥ ಜುಲ್ಮಾನೆ ಮತ್ತು ದಂಡದ ಸಮಗ್ರ ಮೊತ್ತವು ಪ್ರಕರಣ 129ರ ಉಪಪ್ರಕರಣ (1)ರ ಅಡಿಯಲ್ಲಿ ವಿಧಿಸಬಹುದಾದ ದಂಡದ ಮೊತ್ತಕ್ಕಿಂತ ಕಡಿಮೆಯಿರತಕ್ಕದಲ್ಲ:

ಅಲ್ಲದೆ ಪರಂತು, ಯಾವುದೇ ಅಂಥ ಸಾಗಾಣಿಕೆ ವಾಹನವು ಬಾಡಿಗೆ ಮೇಲೆ ಸರಕುಗಳ ಅಥವಾ ಪ್ರಯಾಣಿಕರ ಸಾಗಾಣಿಕೆಗಾಗಿ ಉಪಯೋಗಿಸಿದ್ದಲ್ಲಿ, ಸಾಗಾಣಿಕೆ ವಾಹನದ ಮಾಲೀಕನಿಗೆ, ಸಾಗಾಣಿಕೆ ವಾಹನದ ಮುಟ್ಟುಗೋಲಿಗೆ ಬದಲಾಗಿ ಅದರಲ್ಲಿ ಸಾಗಾಣಿಕೆ ಮಾಡುತ್ತಿರುವ ಸರಕುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾಂತರವಾದ ಶುಲ್ಕವನ್ನು ಸಂದಾಯ ಮಾಡುವ ಆಯ್ಕೆಯನ್ನು ನೀಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲಿಗೆ ಬದಲಾಗಿ ಯಾವುದೇ ಜುಲ್ಮಾನೆಯನ್ನು ವಿಧಿಸಿದ್ದಲ್ಲಿ, ಅಂಥ ಸರಕುಗಳ ಅಥವಾ ಸಾಗಾಣಿಕೆ ವಾಹನದ ಮಾಲೀಕ ಅಥವಾ ಉಪಪ್ರಕರಣ (1)ರ ಅಡಿಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಅದಕ್ಕೆ ಹೆಚ್ಚುವರಿಯಾಗಿ, ಅಂಥ ಸರಕುಗಳಿಗೆ ಅಥವಾ ಸಾಗಾಣಿಕೆ ವಾಹನಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ದಂಡ ಮತ್ತು ವೆಚ್ಚಗಳಿಗೆ ಬಾಧ್ಯನಿರತಕ್ಕದ್ದು.

(4) ಆ ವ್ಯಕ್ತಿಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದೆ, ಸರಕುಗಳು ಅಥವಾ ಸಾಗಾಣಿಕೆ ವಾಹನದ ಮುಟ್ಟುಗೋಲಿನ ಅಥವಾ ದಂಡ ವಿಧಿಸುವಿಕೆಯ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(5) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಸರಕುಗಳನ್ನು ಅಥವಾ ಸಾಗಾಣಿಕೆ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿದ್ದಲ್ಲಿ, ಅದಾದ ಕೂಡಲೇ, ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನದ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(6) ಮುಟ್ಟುಗೋಲನ್ನು ನಿರ್ಣಯಿಸುವ ಯುಕ್ತ ಅಧಿಕಾರಿ ಮುಟ್ಟುಗೋಲು ಮಾಡಲಾಗಿರುವ ವಸ್ತುಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಸ್ವಾಧೀನತೆಯನ್ನು ಹೊಂದಿರತಕ್ಕದ್ದು ಹಾಗೂ ಅಂಥ ಯುಕ್ತ ಅಧಿಕಾರಿಯ ಕೋರಿಕೆಯ ಮೇರೆಗೆ ಪ್ರತಿಯೊಬ್ಬ ಪೋಲೀಸು ಅಧಿಕಾರಿಯು, ಅಂಥ ಸ್ವಾಧೀನತೆಯನ್ನು ತೆಗೆದುಕೊಳ್ಳಲು ಮತ್ತು ಹೊಂದಲು ನೆರವು ನೀಡತಕ್ಕದ್ದು.

(7) ಯುಕ್ತ ಅಧಿಕಾರಿಯು, ಮುಟ್ಟುಗೋಲು ಹಾಕಿಕೊಳ್ಳಲಾದ ಸರಕುಗಳು ಅಥವಾ ಸಾಗಾಣಿಕೆ ವಾಹನವು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಇತರ ನಡಾವಳಿಗಾಗಿ ಅಗತ್ಯವಿರುವುದಿಲ್ಲ ಎಂದು ಸ್ವತಃ ಮನದಟ್ಟು ಮಾಡಿಕೊಂಡ ನಂತರ ಮತ್ತು ಮುಟ್ಟುಗೋಲಿಗೆ ಬದಲಾಗಿ ಜುಲ್ಮಾನೆಯನ್ನು ಸಂದಾಯ ಮಾಡಲು ಮೂರು ತಿಂಗಳುಗಳು ಮೀರದ ಸಮಂಜಸ ಸಮಯವನ್ನು ನೀಡಿದ ನಂತರ, ಅಂಥ ಸರಕುಗಳು ಅಥವಾ ಸಾಗಾಣಿಕೆ ವಾಹನವನ್ನು ವಿಲೇ ಮಾಡಬಹದು ಮತ್ತು ಅದರ ಮಾರಾಟದ ಉತ್ಪತ್ತಿಯನ್ನು ಸರ್ಕಾರದಲ್ಲಿ ಠೇವಣಿಗೊಳಿಸುವುದು.

**131. ಮುಟ್ಟುಗೋಲು ಅಥವಾ ದಂಡ, ಇತರ ದಂಡನೆಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.–** ಅಪರಾಧ ಪ್ರಕ್ರಿಯೆ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಅಧಿನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಮಾಡಿದ ಮುಟ್ಟುಗೋಲು ಅಥವಾ ವಿಧಿಸಿದ ದಂಡವು, ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಆ ಮೂಲಕ ಬಾಧಿತನಾದ ವ್ಯಕ್ತಿಯ ಮೇಲೆ ಯಾವುದೇ ಇತರ ದಂಡನೆಗಳ ವಿಧಿಸುವಿಕೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

# ಅಧ್ಯಾಯ –XVI

## ಇ–ವೇ ನಿಯಮಗಳು

### 01–07–2017ರಿಂದ ಇ–ವೇ ಬಿಲ್ಲಿನ ಜಾರಿ ದಿನಾಂಕದ ಅಧಿಸೂಚನೆಯ ದಿನಾಂಕದವರೆಗೆ

[**138. ಇ–ವೇ ನಿಯಮಗಳು.–** ಇ–ವೇ ಬಿಲ್ ವ್ಯವಸ್ಥೆಯನ್ನು ಅಭಿವೃದ್ಧಪಡಿಸುವ ಮತ್ತು ಪರಿಷತ್‌ನಿಂದ ಅನುಮೋದಿಸುವ ಅಂಥ ಸಮಯದವರೆಗೆ, ಸರ್ಕಾರವು, ಅಧಿಸೂಚನೆಯ ಮೂಲಕ, ಸರಕುಗಳ ಯಾವುದೇ ರವಾನೆಯನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು, ಸರಕುಗಳು ಸಾಗಾಣಿಕೆಯಲ್ಲಿರುವಾಗ ಅಥವಾ ಸಾಗಾಣಿಕೆ ದಾಸ್ತಾನಿನಲ್ಲಿರುವಾಗ ಕೊಂಡೊಯ್ಯತಕ್ಕ ದಸ್ತಾವೇಜುಗಳನ್ನು ನಿರ್ದಿಷ್ಟಪಡಿಸಬಹುದು.]

### ಇ–ವೇ ಬಿಲ್ಲಿನ ಜಾರಿ ದಿನಾಂಕದ ಅಧಿಸೂಚನೆಯ ದಿನಾಂಕದಿಂದ

[1][**138. ಸರಕುಗಳ ಚಲನೆಗಿಂತ ಮೊದಲು ಒದಗಿಸಬೇಕಾದ ಮಾಹಿತಿ ಮತ್ತು ಇ–ವೇ ಬಿಲ್ಲನ್ನು ಸೃಷ್ಟಿಸುವುದು.–** (1) ಐವತ್ತು ಸಾವಿರ ರೂಪಾಯಿಗಳ ರವಾನೆ ಮೌಲ್ಯವನ್ನು ಮೀರಿರುವ–

(i) ಒಂದು ಪೂರೈಕೆಗೆ ಸಂಬಂಧಿಸಿದಂತೆ; ಅಥವಾ

(ii) ಪೂರೈಕೆಯನ್ನು ಹೊರತುಪಡಿಸಿದ ಕಾರಣಗಳಿಗಾಗಿ; ಅಥವಾ

(iii)ಅನೋಂದಾಯಿತ ವ್ಯಕ್ತಿಯಿಂದ ಒಳಮುಖ ಪೂರೈಕೆಯ ಕಾರಣದಿಂದಾಗಿ,

–ಸರಕುಗಳ ಚಲನೆಯನ್ನು ಉಂಟುಮಾಡುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅಂಥ ಚಲನೆಯನ್ನು ಪ್ರಾರಂಭಿಸುವ ಮುನ್ನ, ಸದರಿ ಸರಕುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು:

[2][ಪರಂತು, ರಾಜ್ಯದಲ್ಲಿ ನೆಲೆಗೊಂಡಿರುವ ಒಬ್ಬ ಪ್ರಧಾನಕರ್ತನಿಂದ ಯಾವುದೇ ಇತರ ರಾಜ್ಯದಲ್ಲಿ ನೆಲೆಗೊಂಡಿರುವ ಮಜೂರಿ ಕೆಲಸಗಾರನಿಗೆ ಸರಕುಗಳನ್ನು ಕಳುಹಿಸಿದ್ದಲ್ಲಿ, ಪ್ರಧಾನ ಕರ್ತನು ರವಾನೆಯ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಇ–ವೇ ಬಿಲ್ಲನ್ನು ಸೃಷ್ಟಿಸತಕ್ಕದ್ದು:

ಮತ್ತು ಪರಂತು, ಪ್ರಕರಣ 24ರ ಖಂಡ (i) ಮತ್ತು (ii)ರುಗಳ ಅಡಿಯಲ್ಲಿ ನೋಂದಣಿ ಪಡೆಯುವ ಅಗತ್ಯತೆಯಿಂದ ವಿನಾಯತಿಗೊಂಡಿರುವ ಒಬ್ಬ ವ್ಯಕ್ತಿಯಿಂದ ಕರಕುಶಲ ಸರಕುಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಾಗಾಣಿಕೆಯಾಗುತ್ತಿದ್ದಲ್ಲಿ, ಸದರಿ ವ್ಯಕ್ತಿಯು ರವಾನೆಯ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಇ–ವೇ ಬಿಲ್ಲನ್ನು ಸೃಷ್ಟಿಸತಕ್ಕದ್ದು.

---

[1]ಪ್ರಕರಣ 138ರಿಂದ 138ಡಿಯ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಡಿ/2017) ದಿನಾಂಕ 30–08–2017ರ ಮೂಲಕ ನಿಯಮ 138ನ್ನು ಬದಲಿಸಲಾಗಿದೆ ಮತ್ತು ನಿಯಮ 138ಎ ಯಿಂದ 138ಡಿಯನ್ನು ಸೇರಿಸಲಾಗಿದೆ.

[2]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಇ/2017) ದಿನಾಂಕ 04–10–2017ರ ಮೂಲಕ ಸೇರಿಸಲಾಗಿದೆ.

**ವಿವರಣೆ–** ಈ ನಿಯಮದ ಉದ್ದೇಶಕ್ಕಾಗಿ, ಪದವಾಳಿಯಾದ "ಕರಕುಶಲ ಸರಕುಗಳು" ಎನ್ನುವುದು, ದಿನಾಂಕ 16ನೇ ಸೆಪ್ಟಂಬರ್ 2017ರ ಕರ್ನಾಟಕ ವಿಶೇಷ ರಾಜ್ಯಪತ್ರ, ಸಂ.887 ರ ಭಾಗ–ಎನಲ್ಲಿ ಪ್ರಕಟವಾದ ಅಧಿಸೂಚನೆ ಆಇ 47 ಸಿಎಸ್‌ಎಲ್ 2017ರ (ಸಂ.6/2017) ದಿನಾಂಕ: 15–09–2017ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರವುದು.]

**(2)** ಸರಕುಗಳ ರವಾನೆದಾರನಾಗಿ ಅಥವಾ ರವಾನೆ ಸ್ವೀಕೃತಿದಾರನಂತೆ ಪೂರೈಕೆಯ ಸ್ವೀಕರಿಸುವವನಾಗಿ, ನೋಂದಾಯಿತ ವ್ಯಕ್ತಿಯು, ಆತನ ಸ್ವಂತ ಸಾಗಾಣಿಕೆ ವಾಹನದಲ್ಲಾಗಲಿ ಅಥವಾ ಬಾಡಿಗೆಯದಾಗಿರಲಿ ಅಥವಾ ರೈಲ್ವೆಗಳ ಮೂಲಕ ಅಥವಾ ವಾಯುಯಾನದ ಮೂಲಕ ಅಥವಾ ನೌಕೆಯ ಮೂಲಕವಾಗಲಿ, ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ಸದರಿ ವ್ಯಕ್ತಿಯು ಅಥವಾ ಸ್ವೀಕರಿಸುವವನು, **ನಮೂನೆ ಜಿಎಸ್‌ಟಿ ಎಡಬ್ಲೂಬಿ–01** ರ **ಭಾಗ–ಬಿ**ನಲ್ಲಿ ಮಾಹಿತಿಯನ್ನು ಒದಗಿಸಿದ ನಂತರ, ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರಲ್ಲಿ ಸಾಮಾನ್ಯ ಪೋರ್ಟಲ್‌ನಲ್ಲಿ, ಇ–ವೇ ಬಿಲ್ಲನ್ನು ಸೃಷ್ಟಿಸಬಹುದು.

**(3)** ಉಪನಿಯಮ (2)ರ ಅಡಿಯಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿಲ್ಲದಿದ್ದಲ್ಲಿ ಮತ್ತು ರಸ್ತೆಯ ಮೂಲಕ ಸಾಗಾಣಿಕೆಗಾಗಿ ಸರಕುಗಳನ್ನು ಸಾಗಾಣಿಕೆದಾರನಿಗೆ ಕೈಗೊಪ್ಪಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಬಿ**ನಲ್ಲಿ ಸಾಗಾಣಿಕೆದಾರನಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನೋಂದಾಯಿತ ವ್ಯಕ್ತಿಯು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–'ಎ'**ನಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ, ಇ–ವೇ ಬಿಲ್ಲನ್ನು ಸಾಗಾಣಿಕೆದಾರನು ಸದರಿ ಪೋರ್ಟಲ್‌ನಲ್ಲಿ ಸೃಷ್ಟಿಸತಕ್ಕದ್ದು:

ಪರಂತು, ನೋಂದಾಯಿತ ವ್ಯಕ್ತಿ ಅಥವಾ ಸಂದರ್ಭಾನುಸಾರವಾಗಿ ಸಾಗಾಣಿಕೆದಾರನು, ಆತನ ಆಯ್ಕೆಯಲ್ಲಿ, ರವಾನೆ ಸರಕಿನ ಮೌಲ್ಯ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದರೂ ಸಹ, ಇ–ವೇ ಬಿಲ್ಲನ್ನು ಸೃಷ್ಟಿಸಬಹುದು ಮತ್ತು ಅದನ್ನು ಕೊಂಡೊಯ್ಯಬಹುದು:

ಮತ್ತು ಪರಂತು, ಒಬ್ಬ ಅನೋಂದಾಯಿತ ವ್ಯಕ್ತಿಯಿಂದ, ಆತನ ಸ್ವಂತ ಸಾಗಾಣಿಕೆ ವಾಹನದಿಂದ ಅಥವಾ ಬಾಡಿಗೆಯದರ ಮೂಲಕ ಅಥವಾ ಒಬ್ಬ ಸಾಗಾಣಿಕೆದಾರನ ಮೂಲಕ, ಸಾಗಾಣಿಕೆ ಉಂಟಾದಲ್ಲಿ, ಆತನು ಅಥವಾ ಸಾಗಾಣಿಕೆದಾರನು, ಅವರ ಆಯ್ಕೆಯಲ್ಲಿ, ಇ–ವೇ ಬಿಲ್ಲನ್ನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01ರಲ್ಲಿ** ಸಾಮಾನ್ಯ ಪೋರ್ಟಲ್‌ನಲ್ಲಿ, ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದಿ ವಿಧಾನದಲ್ಲಿ ಸೃಷ್ಟಿಸತಕ್ಕದ್ದು:

ಅಲ್ಲದೆ ಪರಂತು, ಸರಕುಗಳು, ರವಾನೆದಾರನ ವ್ಯವಹಾರ ಸ್ಥಳದಿಂದ, ಸಾಗಾಣಿಕದಾರನ ವ್ಯವಹಾರ ಸ್ಥಳಕ್ಕೆ ಮುಂದಿನ ಸಾಗಾಣಿಕೆಗಾಗಿ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಹತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ಅಂತರದಲ್ಲಿ ಸಾಗಾಣಿಕೆಯಾಗಿದ್ದಲ್ಲಿ, ಪೂರೈಕೆದಾರ ಅಥವಾ ಸಾಗಾಣಿಕೆದಾರ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01 ರ ಭಾಗ–ಬಿ**ನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಒದಗಿಸದಿರಬಹುದು.

ವಿವರಣೆ 1. ಈ ಉಪನಿಯಮದ ಉದ್ದೇಶಗಳಿಗಾಗಿ, ಒಬ್ಬ ಅನೋಂದಾಯಿತ ಪೂರೈಕೆದಾರನಿಂದ ನೋಂದಾಯಿತನಾಗಿರುವ ಸ್ವೀಕರಿಸುವವನಿಗೆ ಸರಕುಗಳು ಪೂರೈಕೆಯಾಗಿದ್ದಲ್ಲಿ, ಸರಕುಗಳ ಚಲನೆಯನ್ನು ಪ್ರಾರಂಭಿಸುವ ಸಮಯದಲ್ಲಿ, ಸ್ವೀಕರಿಸುವವನು ಗೊತ್ತಿದ್ದರೆ, ಅಂಥ ಸ್ವೀಕರಿಸುವವನಿಂದ ಚಲನೆಯು ಉಂಟಾಗಿದೆ ಎಂದು ಹೇಳತಕ್ಕದ್ದು.

ವಿವರಣೆ 2.–, ರೈಲ್ವೆಗಳ ಮೂಲಕ ಅಥವಾ ನೌಕೆಯ ಮೂಲಕ ಅಥವಾ ವಾಯುಯಾನದ ಮೂಲಕ ಸರಕುಗಳ ಸಾಗಾಣಿಕೆಯನ್ನು ಮಾಡಿದ್ದಲ್ಲಿ, ರವಾನೆದಾರನು ಅಥವಾ ರವಾನೆ ಸ್ವೀಕೃತಿದಾರನಂತೆ ಪೂರೈಕೆಯ ಸ್ವೀಕರಿಸುವವನು, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ಯಲ್ಲಿನ ಮಾಹಿತಿಯನ್ನು ಒದಗಿಸತಕ್ಕದ್ದು.

(4) ಸಾಮಾನ್ಯ ಪೋರ್ಟಲ್‌ನಲ್ಲಿ ಇ–ವೇ ಬಿಲ್ಲನ್ನು ಸೃಷ್ಟಿಸಿದ ತರುವಾಯ, ಪೂರೈಕೆದಾರನಿಗೆ, ಸ್ವೀಕರಿಸುವವನಿಗೆ ಮತ್ತು ಸಾಗಾಣಿಕೆದಾರನಿಗೆ, ಒಂದು ವಿಶಿಷ್ಟ ಇ–ವೇ ಬಿಲ್ಲಿನ ಸಂಖ್ಯೆಯನ್ನು (ಇಬಿಎನ್) ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯ ಮಾಡತಕ್ಕದ್ದು.

(5) ಸರಕುಗಳನ್ನು ಸಂಚಾರದ ಕ್ರಮದಲ್ಲಿ ಒಂದು ಸಾಗಾಣಿಕೆ ವಾಹನದಿಂದ ಮತ್ತೊಂದಕ್ಕೆ, ವರ್ಗಾಯಿಸುತ್ತಿರುವ ಯಾವೊಬ್ಬ ಸಾಗಾಣಿಕೆದಾರನು, ಅಂಥ ವರ್ಗಾವಣೆ ಮತ್ತು ಮುಂದಿನ ಸರಕುಗಳ ಚಲನೆಗಿಂತ ಮೊದಲು, ಸಾಗಾಣಿಕೆ ವಾಹನದ ವಿವರಗಳನ್ನು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ರಲ್ಲಿ ಅಪ್‌ಡೇಟ್ ಮಾಡತಕ್ಕದ್ದು.:

ಪರಂತು, ಸರಕುಗಳು, ಸಾಗಾಣಿಕದಾರನ ವ್ಯವಹಾರ ಸ್ಥಳದಿಂದ, ರವಾನೆ ಸ್ವೀಕೃತಿದಾರನ ವ್ಯವಹಾರ ಸ್ಥಳಕ್ಕೆ ಅಂತಿಮವಾಗಿ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಒಳಗೆ ಹತ್ತು ಕಿಲೋಮೀಟರುಗಳಿಗಿಂತ ಕಡಿಮೆಯ ಅಂತರದಲ್ಲಿ ಸಾಗಾಣಿಕೆಯಾಗಿದ್ದಲ್ಲಿ ಇ–ವೇ ಬಿಲ್ಲಿನಲ್ಲಿ ಸಾಗಾಣಿಕೆ ವಾಹನದ ವಿವರಗಳನ್ನು ಅಪ್‌ಡೇಟ್ ಮಾಡದಿರಬಹುದು.

(6) ಉಪ ನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ ಇ–ವೇ ಬಿಲ್ಲನ್ನು ಸೃಷ್ಟಿಸಿದ ನಂತರ, ಒಂದು ಸಾಗಾಣಿಕೆ ವಾಹನದಲ್ಲಿ ಬಹು ಸರಕು ರವಾನೆಗಳನ್ನು ಸಾಗಾಣಿಕೆ ಮಾಡಲು ಉದ್ದೇಶಿಸಿದ್ದಲ್ಲಿ, ಸಾಗಾಣಿಕೆದಾರನು, ಅಂಥ ಪ್ರತಿಯೊಂದು ಸರಕು ರವಾನಗೆ ಸಂಬಂಧಿಸಿದಂತೆ ಸೃಷ್ಟಿಸಲಾದ ಇ–ವೇ ಬಿಲ್ಲುಗಳ ಕ್ರಮ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಸೂಚಿಸಬಹುದು ಮತ್ತು ಸರಕುಗಳ ಚಲನೆಯ ಮುನ್ನ ಸದರಿ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇ ಬಿಲ್ಲನ್ನು ಆತನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು.

(7) ಸರಕುಗಳ ರವಾನೆದಾರ ಅಥವಾ ಸ್ವೀಕರಿಸವವನು ಉಪನಿಯಮ (1)ರ ಉಪಬಂಧಗಳಿಗೆ ಅನುಸಾರವಾಗಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ನ್ನು ಸೃಷ್ಟಿಸಿರದಿದ್ದಲ್ಲಿ ಮತ್ತು ಸಾಗಾಣಿಕೆ ವಾಹನದಲ್ಲಿ ಕೊಂಡೊಯ್ಯುತ್ತಿರುವ ಸರಕುಗಳ ಮೌಲ್ಯವು ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿದ್ದಲ್ಲಿ, ಸಾಗಾಣಿಕೆದಾರನು ಸಂದರ್ಭಾನುಸಾರವಾಗಿ ಬೆಲೆಪಟ್ಟಿ ಅಥವಾ ಪೂರೈಕೆ ಬಿಲ್ಲು ಅಥವಾ ಬಟವಾಡೆ ಚಲನ್ ಆಧಾರದಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–01**ನ್ನು ಸೃಷ್ಟಿಸತಕ್ಕದ್ದು ಮತ್ತು ಸರಕುಗಳ ಚಲನೆಯ ಮುನ್ನ ಸಾಮಾನ್ಯ ಪೋರ್ಟಲ್‌ನಲ್ಲಿ ಕ್ರೋಢೀಕೃತ ಇ–ವೇ ಬಿಲ್ಲನ್ನು ಸಹ **ನಮೂನೆ ಜಿಎಸ್‌ಟಿ ಇಡಬ್ಲೂಬಿ–02**ರಲ್ಲಿ ಸೃಷ್ಟಿಸಬಹುದು.

(8) **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಎ**ಯಲ್ಲಿ ಒದಗಿಸಿದ ಮಾಹಿತಿಯನ್ನು ನೋಂದಾಯಿತ ವ್ಯಕ್ತಿಗೆ ಲಭ್ಯವಾಗುವಂತೆ ಮಾಡತಕ್ಕದ್ದು, ಆತನು ಅದನ್ನು **ನಮೂನೆ ಜಿಎಸ್‌ಟಿಆರ್–1**ರಲ್ಲಿ ವಿವರಗಳನ್ನು ಒದಗಿಸುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದು.

ಪರಂತು ಒಬ್ಬ ಅನೋಂದಾಯಿತ ಪೂರೈಕೆದಾರನು **ನಮೂನೆ ಜಿಎಸ್‌ಟಿಇಡಬ್ಲೂಬಿ–01** ರಲ್ಲಿ ಮಾಹಿತಿಯನ್ನು ಒದಗಿಸಿದಾಗ, ಮೊಬೈಲ್ ಸಂಖ್ಯೆ ಅಥವಾ ಮಿಂಚಂಚೆ ಲಭ್ಯವಿದ್ದಲ್ಲಿ, ಆತನಿಗೆ ವಿದ್ಯುನ್ಮಾನ ರೀತಿಯಲ್ಲಿ ತಿಳಿಸತಕ್ಕದ್ದು.

(9) ಈ ನಿಯಮದ ಅಡಿಯಲ್ಲಿ ಇ–ವೇ ಬಿಲ್ ಸೃಷ್ಟಿಸಲಾಗಿದ್ದು, ಆದರೆ ಸರಕುಗಳು ಸಾಗಾಣಿಕೆಯಾಗಿಲ್ಲದಿರುವುದಾಗಲಿ ಅಥವಾ ಇ–ವೇ ಬಿಲ್ಲಿನಲ್ಲಿ ಒದಗಿಸಿದ ವಿವರಗಳ ಪ್ರಕಾರ ಸಾಗಾಣಿಕೆಯಾಗಿಲ್ಲದಿರುವುದಾಗಲಿ ಹಾಗಿದ್ದಲ್ಲಿ, ಇ–ವೇ ಬಿಲ್ಲನ್ನು, ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಿದ ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ರೀತಿಯಲ್ಲಿ, ಇ–ವೇ ಬಿಲ್ಲನ್ನು ಸೃಷ್ಟಿಸಿದ 24 ಗಂಟೆಗಳ ಒಳಗಾಗಿ ರದ್ದುಪಡಿಸಬಹುದು:

ಪರಂತು, ಇ–ವೇ ಬಿಲ್ಲನ್ನು, ಅದನ್ನು ನಿಯಮ 138 ಬಿಯ ಉಪಬಂಧಗಳಿಗೆ ಅನುಸಾರವಾಗಿ ಸಂಚಾರದಲ್ಲಿ ಪರಿಶೀಲಿಸಲಾಗಿದ್ದಲ್ಲಿ, ರದ್ದುಪಡಿಸಬಾರದು.

(10) ಈ ನಿಯಮದ ಅಡಿಯಲ್ಲಿ ಸೃಷ್ಟಿಸಿದ ಒಂದು ಇ–ವೇ ಬಿಲ್ಲು ಅಥವಾ ಒಂದು ಕ್ರೋಢೀಕೃತ ಇ–ವೇ ಬಿಲ್ಲು, ಕೆಳಕಂಡ ಕೋಷ್ಟಕದ ಕಾಲಂ (3)ರಲ್ಲಿ ನಮೂದಿಸಿರುವ ಅವಧಿಗಾಗಿ, ಸಂಬಂಧಿಸಿದ ದಿನಾಂಕದಿಂದ, ಸರಕುಗಳು ಸಾಗಾಣಿಕೆಯಾಗಬೇಕಿರುವ ಕಾಲಂ (2)ರಲ್ಲಿ ನಮೂದಿಸಿರುವ ಅಂತರಕ್ಕಾಗಿ ಸಿಂಧುವಾಗಿರತಕ್ಕದ್ದು:

**ಕೋಷ್ಟಕ**

| **ಕ್ರ.ಸಂ** | **ಅಂತರ** | **ಸಿಂಧುತ್ವದ ಅವಧಿ** |
|---|---|---|
| **(1)** | **(2)** | **(3)** |
| 1. | 100 ಕಿ,ಮೀ ವರೆಗೆ | ಒಂದು ದಿನ |
| 2. | ಪ್ರತಿ 100 ಕಿ.ಮೀ ಅಥವಾ ಅದರ ಭಾಗದ ತದನಂತರದಕ್ಕಾಗಿ | ಒಂದು ಹೆಚ್ಚುವರಿ ದಿನ |

ಪರಂತು ಆಯುಕ್ತರು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಸರಕುಗಳ ವರ್ಗಗಳಿಗಾಗಿ ಇ–ವೇ ಬಿಲ್ಲಿನ ಸಿಂಧುತ್ವದ ಅವಧಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಒಂದು ವಿಶೇಷ ಸ್ವರೂಪದ ಸನ್ನಿವೇಶಗಳ ಅಡಿಯಲ್ಲಿ, ಇ–ವೇ ಬಿಲ್ಲಿನ ಸಿಂಧುತ್ವದ ಅವಧಿಯ ಒಳಗಾಗಿ ಸರಕುಗಳನ್ನು ಸಾಗಾಣಿಕೆ ಮಾಡಲಾಗದಿದ್ದಲ್ಲಿ, ಸಾಗಾಣಿಕೆದಾರನು **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಬಿ** ಯಲ್ಲಿ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ ಮತ್ತೊಂದು ಇ–ವೇ ಬಿಲ್ಲನ್ನು ಸೃಷ್ಟಿಸಬಹುದು.

(11) ಉಪನಿಯಮ (1)ರ ಅಡಿಯಲ್ಲಿ ಸೃಷ್ಟಿಸಿದ ಇ–ವೇ ಬಿಲ್ಲಿನ ವಿವರಗಳನ್ನು ಸ್ವೀಕರಿಸುವವನಿಗೆ, ನೋಂದಾಯಿತನಾಗಿದ್ದರೆ ಸಾಮಾನ್ಯ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು, ಆತನು ಇ–ವೇ ಬಿಲ್ಲಿನಿಂದ ವ್ಯಾಪ್ತವಾದ ಸರಕು ರವಾನೆಯ ತನ್ನ ಅಂಗೀಕಾರ ಅಥವಾ ತಿರಸ್ಕರಿಸಿದುದರ ಬಗ್ಗೆ ತಿಳಿಸತಕ್ಕದ್ದು.

(12) ಉಪನಿಯಮ (11)ರಲ್ಲಿ ಉಲ್ಲೇಖಿಸಲಾದ ಸ್ವೀಕರಿಸುವವನು, ಆತನಿಗೆ ಸಾಮಾನ್ಯ ಪೋರ್ಟಲ್‌ನಲ್ಲಿ ವಿವರಗಳನ್ನು ಲಭ್ಯಗೊಳಿಸಿದ ಎಪ್ಪತ್ತೆರಡು ಗಂಟೆಗಳ ಒಳಗಾಗಿ ತನ್ನ ಅಂಗೀಕಾರ ಅಥವಾ ತಿರಸ್ಕಾರವಾದ ಬಗ್ಗೆ ತಿಳಿಸಿಲ್ಲದಿದ್ದಲ್ಲಿ, ಸದರಿ ವಿವರಗಳನ್ನು ಆತನು ಅಂಗೀಕರಿಸಿದ್ದಾನೆ ಎಂದು ಪರಿಭಾವಿತವಾಗತಕ್ಕದ್ದು.

(13) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು ಅಥವಾ ಯಾವುದೇ ಇತರ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ನಿಯಮ 138ರ ಅಡಿಯಲ್ಲಿ ಸೃಷ್ಟಿಸಿದ ಇ–ವೇ ಬಿಲ್ ರಾಜ್ಯದಲ್ಲಿ ಸಿಂಧುವಾಗಿರತಕ್ಕದ್ದು.

(14) ಈ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೆಳಕಂಡುವುಗಳಿಗೆ ಯಾವುದೇ ಇ–ವೇ ಬಿಲ್ಲನ್ನು ಸೃಷ್ಟಿಸುವುದು ಅಗತ್ಯವಿರತಕ್ಕದ್ದಲ್ಲ–

(ಎ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಬಿ) ಯಾಂತ್ರೀಕೃತವಲ್ಲದ ಸಾಗಾಣಿಕೆ ವಾಹನದಲ್ಲಿ, ಸರಕುಗಳನ್ನು ಸಾಗಾಣಿಕೆ ಮಾಡುತ್ತಿದ್ದಲ್ಲಿ;

(ಸಿ) ಸರಕುಗಳನ್ನು, ಬಂದರು, ವಿಮಾನ ನಿಲ್ದಾಣ, ವಾಯುಯಾನ ಕಾರ್ಗೋ ಸಂಕೀರ್ಣ ಮತ್ತು ಭೂ ಸೀಮಾಸುಂಕ ಠಾಣೆಯಿಂದ ಒಳನಾಡು (ಇನ್ ಲ್ಯಾಂಡ್) ಕಂಟೈನರ್ ಡಿಪೋ ಅಥವಾ ಒಂದು ಕಂಟೈನರ್ ಸಾಗಣಿಕೆ ಠಾಣೆಗೆ ಸೀಮಾಸುಂಕ ತೀರುವೆಗಾಗಿ, ಸಾಗಾಣಿಕೆ ಮಾಡುತ್ತಿದ್ದಲ್ಲಿ; ಮತ್ತು

(ಡಿ) ಆಯುಕ್ತರು, ಕೇಂದ್ರ ತೆರಿಗೆಯ ಮುಖ್ಯ ಆಯುಕ್ತರೊಡನೆ ಸಮಾಲೋಚಿಸಿ ಅಧಿಸೂಚಿಸಬಹುದಾದ ಅಂಥ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ ಮತ್ತು ಕರ್ನಾಟಕ ರಾಜ್ಯದ ಅಂಥ ಪ್ರದೇಶಗಳ ಒಳಗಾಗಿ ಮತ್ತು ಅಂಥ ಮೊತ್ತವನ್ನು [3][ಮೀರಿಲ್ಲದ ಮೌಲ್ಯಗಳಿಗಾಗಿ];

ವಿವರಣೆ,– ಇ–ವೇ ಬಿಲ್ಲನ್ನು ಸೃಷ್ಟಿಸುವ ಮತ್ತು ರದ್ದುಪಡಿಸುವ ಸೌಲಭ್ಯವನ್ನು ಎಸ್‌ಎಂಎಸ್ ಮೂಲಕವು ಸಹ ಲಭ್ಯವಾಗುವಂತೆ ಮಾಡಬಹುದು.

---

[3]"ಮೀರಿದ ಮೌಲ್ಯಗಳಿಗಾಗಿ" ಪದಗಳಿಗಾಗಿ ಶುದ್ಧಿಪತ್ರ ಸಂ. ಆಇ 48 ಸಿಎಸ್‌ಎಲ್ 2017 ದಿನಾಂಕ 28–12–2017 ರ ಮೂಲಕ ತಿದ್ದುಪಡಿ ಮಾಡಲಾಗಿದೆ.

# ಅನುಬಂಧ

| ಕ್ರ.ಸಂ. | ಅಧ್ಯಾಯ/ಶಿರೋನಾಮೆ /ಉಪ–ಶಿರೋನಾಮೆ/ ದರದ ವಸ್ತು | ಸರಕುಗಳ ವಿವರ |
|---|---|---|
| (1) | (2) | (3) |
| 1. | 0101 | ಸಜೀವ ಕತ್ತೆಗಳು, ಹೇಸರಗತ್ತೆಗಳು, ಹಿನ್ನಿಗಳು |
| 2. | 0102 | ಸಜೀವ ಗೋಜಾತಿಯ ಪ್ರಾಣಿಗಳು |
| 3. | 0103 | ಸಜೀವ ಹಂದಿ |
| 4. | 0104 | ಸಜೀವ ಕುರಿ ಮತ್ತು ಮೇಕೆಗಳು |
| 5. | 0105 | ಸಜೀವ ಕುಕ್ಕುಟಗಳು, ಅರ್ಥಾತ್, *ಗ್ಯಾಲಸ್ ಡೊಮೆಸ್ತಿಕಸ್* ಪ್ರಬೇಧಗಳ ಕೋಳಿಗಳು, ಬಾತು ಕೋಳಿಗಳು, ಹೆಬ್ಬಾತುಗಳು, ಟರ್ಕಿಗಳು ಮತು ಗಿನಿ ಕೋಳಿಗಳು |
| 6. | 0106 | ಸಸ್ತನಿಗಳು, ಪಕ್ಷಿಗಳು, ಕೀಟಗಳು ಮುಂತಾದ, ಇತರೆ ಸಜೀವ ಪ್ರಾಣಿಗಳು |
| 7. | 0201 | ಗೋಜಾತಿ ಪ್ರಾಣಿಗಳ ತಾಜಾ ಮತ್ತು ಶೀತಲೀಕರಿಸಿದ, ಮಾಂಸ |
| 8. | 0202 | ಗೋಜಾತಿಯ ಪ್ರಾಣಿಗಳ ಹೆಪ್ಪುಗಟ್ಟಿಸಿದ ಮಾಂಸ [ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 9. | 0203 | ಹಂದಿಯ ತಾಜಾ, ಶೀತಲೀಕರಿಸಿದ, ಹೆಪ್ಪುಗಟ್ಟಿಸಿದ ಮಾಂಸ [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 10. | 0204 | ಕುರಿಗಳ ಅಥವಾ ಮೇಕೆಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಮಾಂಸ [ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 11. | 0205 | ಕುದುರೆಗಳು, ಕತ್ತೆಗಳು, ಹೇಸರಗತ್ತೆಗಳು, ಹಿನ್ನಿಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಮಾಂಸ [ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |

| ಕ್ರ.ಸಂ. | ಅಧ್ಯಾಯ/ಶಿರೋನಾಮೆ /ಉಪ–ಶಿರೋನಾಮೆ/ ದರದ ವಸ್ತು | ಸರಕುಗಳ ವಿವರ |
|---|---|---|
| (1) | (2) | (3) |
| 12. | 0206 | ಗೋಜಾತಿಗೆ ಸೇರಿದ ಪ್ರಾಣಿಗಳ, ಹಂದಿ, ಕುರಿ, ಮೇಕೆ, ಕುದುರೆ, ಕತ್ತೆ, ಹೇಸರುಗತ್ತೆ, ಅಥವಾ ಹಿನ್ನಿಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಖಾದ್ಯ ಮಾಂಸದ ತ್ಯಾಜ್ಯ (ಆಫಲ್) [ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 13. | 0207 | ಶಿರೋನಾಮೆ 0105ರ ಕುಕ್ಕುಟಗಳ ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಮಾಂಸ ಮತ್ತು ಖಾದ್ಯ ಮಾಂಸದ ತ್ಯಾಜ್ಯ (ಆಫಲ್)[ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 14. | 0208 | ತಾಜಾ, ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ ಇತರೇ ಮಾಂಸ ಮತ್ತು ಖಾದ್ಯ ಮಾಂಸದ ತ್ಯಾಜ್ಯ (ಆಫಲ್) [ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 15. | 0209 | ಕರಗಿಸಿಲ್ಲದ ಅಥವಾ ಅನ್ಯಥಾ ಹೊರತೆಗೆದಿಲ್ಲದಿರುವ ಶೀತಲೀಕರಿಸಿದ ಅಥವಾ ಹೆಪ್ಪುಗಟ್ಟಿಸಿದ, ಹಂದಿ ಕೊಬ್ಬು, ತೆಳ್ಳನೆ ಮಾಂಸ ಮುಕ್ತವಾದುದು, ಮತ್ತು ಕುಕ್ಕಟದ ಕೊಬ್ಬು [ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |
| 16. | 0209 | ಕರಗಿಸಿಲ್ಲದ ಅಥವಾ ಅನ್ಯಥಾ ಹೊರತೆಗೆದಿಲ್ಲದಿರುವ ಉಪ್ಪುಲೇಪಿತ, ಬ್ರೈನ್‌ನಲ್ಲಿ ಶೇಖರಿಸಿದ, ಒಣಗಿಸಿದ, ಅಥವಾ ಹೊಗೆಯಾಡಿಸಿದ ಹಂದಿ ಕೊಬ್ಬು, ತೆಳ್ಳನೆ ಮಾಂಸ ಮುಕ್ತವಾದುದು, ಮತ್ತು ಕುಕ್ಕಟದ ಕೊಬ್ಬು [ ಹೆಪ್ಪುಗಟ್ಟಿಸಿ ಮತ್ತು ಘಟಕದ ಧಾರಕದಲ್ಲಿಟ್ಟಿರುವುದನ್ನು ಹೊರತುಪಡಿಸಿದಂತೆ] |

| | | |
|---|---|---|
| 17. | 0210 | ಅಳತೆಯ ಧಾರಕಗಳಲ್ಲಿಟ್ಟಿರುವುದನ್ನು ಹೊರತುಪಡಿಸಿದ, ಉಪ್ಪುಲೇಪಿತ, ಬ್ರೈನ್‌ನಲ್ಲಿ ಶೇಖರಿಸಿದ, ಒಣಗಿಸಿದ, ಅಥವಾ ಹೊಗೆಯಾಡಿಸಿದ ಮಾಂಸ ಮತ್ತು ಖಾದ್ಯ ಮಾಂಸ ತ್ಯಾಜ್ಯ (ಆಫಲ್); ಮಾಂಸ ಮತ್ತು ಖಾದ್ಯ ಮಾಂಸ ತ್ಯಾಜ್ಯದ (ಆಫಲ್) ಖಾದ್ಯ ಹಿಟ್ಟು ಮತ್ತು ಮೀಲ್ಸ್. |
| 18. | 3 | ಮೀನು ಬೀಜಗಳು, ಪ್ರಾನ್/ಸೀಗಡಿ ಬೀಜಗಳು, ಸಂಸ್ಕರಿಸಿರಲಿ, ಶುದ್ಧೀಕರಿಸಿರಲಿ ಅಥವಾ ಶೀತಲೀಕರಿಸಿದ ಸ್ಥಿತಿಯಲ್ಲಿರಲಿ ಅಥವಾ ಇಲ್ಲದಿರಲಿ ( ಅಧ್ಯಾಯ 3ರ ಅಡಿಯಲ್ಲಿ ಬರುವ ಮತ್ತು ಶೇ.2.5%ರಷ್ಟು ತೆರಿಗೆಯನ್ನು ಆಕರ್ಷಿಸುವ ಸರಕುಗಳನ್ನು ಹೊರತುಪಡಿಸಿದಂತೆ) |
| 19. | 0301 | ಸಜೀವ ಮೀನು |
| 20. | 0302 | ಶಿರೋನಾಮೆ 0304ರ ಮೀನಿನ ಫಿಲ್ಲೇಟ್ಗಳು ಮತ್ತು ಇತರೆ ಮೀನಿನ ಮಾಂಸವನ್ನು ಹೊರತುಪಡಿಸಿದ ತಾಜಾ, ಅಥವಾ ಶೀತಲೀಕರಿಸಿದ ಮೀನು |
| 21. | 0304 | ತಾಜಾ, ಅಥವಾ ಶೀತಲೀಕರಿಸಿದ ಮೀನಿನ ಫಿಲ್ಲೇಟ್‌ಗಳು ಮತ್ತು ಇತರೆ ಮೀನಿನ ಮಾಂಸ (ಕತ್ತರಿಸಿರಲಿ ಅಥವಾ ಇಲ್ಲದಿರಲಿ) |
| 22. | 0306 | ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಕಠಿಣ ಚರ್ಮಿಗಳು, ಚಿಪ್ಪಿನಲ್ಲಿರಲಿ ಅಥವಾ ಇಲ್ಲದಿರಲಿ; ಹಬೆಯಲ್ಲಿ ಬೇಯಿಸಿದ ಅಥವಾ ನೀರಿನಲ್ಲಿ ಕುದಿಸಿದ ಚಿಪ್ಪಿನಲ್ಲಿರುವ ಸಜೀವ, ತಾಜಾ, ಅಥವಾ |
| 23. | 0307 | ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಮೃದ್ವಂಗಿಗಳು, ಚಿಪ್ಪಿನಲ್ಲಿರಲಿ ಅಥವಾ ಇಲ್ಲದಿರಲಿ; ಸಜೀವ, ತಾಜಾ, ಅಥವಾ ಶೀತಲೀಕರಿಸಿದ |
| 24. | 0308 | ಕಠಿಣ ಚರ್ಮಿಗಳು ಮತ್ತು ಮೃದ್ವಂಗಿಯಲ್ಲದ, ಸಜೀವ, ತಾಜಾ, ಅಥವಾ ಶೀತಲೀಕರಿಸಿದ ಜಲವಾಸಿ ಅಕಶೇರುಕಗಳು; |
| 25. | 0401 | ಬೇರ್ಪಡಿಸಿದ ಹಾಲು, ಹಾಲು ಮತ್ತು ಕ್ರೀಮ್ ಒಳಗೊಂಡಂತೆ, ಸಾಂದ್ರೀಕರಿಸದ ಅಥವಾ ಸಕ್ಕರೆ ಅಥವಾ ಇನ್ನಿತರ ಸಿಹಿ ಅಂಶಗಳನ್ನು ಸೇರಿಸಿರುವುದನ್ನು ಒಳಗೊಳ್ಳದ, ತಾಜಾ ಹಾಲು ಮತ್ತು ಪಾಶ್ಚರೀಕೃತ ಹಾಲು, ಅಲ್ಟ್ರಾ ಅಧಿಕ ಉಷ್ಣತೆಯ (UHT) ಹಾಲನ್ನು ಹೊರತುಪಡಿಸಿದಂತೆ |
| 26. | 0403 | ಮೊಸರು; ಲಸ್ಸಿ; ಮಜ್ಜಿಗೆ |
| 27. | 0406 | ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದ ಚೆನಾ ಅಥವಾ ಪನೀರ್. |
| 28. | 0407 | ಚಿಪ್ಪಿನಲ್ಲಿರುವ, ತಾಜಾ, ಸಂರಕ್ಷಿಸಿದ ಅಥವಾ ಬೇಯಿಸಿದ ಪಕ್ಷಿಗಳ ಮೊಟ್ಟೆಗಳು |
| 29. | 0409 | ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದ ನೈಸರ್ಗಿಕ ಜೇನುತುಪ್ಪ. |
| 30. | 0501 | ಸಜ್ಜುಗೊಳಿಸದ ಮಾನವ ಕೂದಲು, ತೊಳೆದಿರಲಿ ಅಥವಾ ಶುಚಿಗೊಳಿಸಿರಲಿ ಅಥವಾ ಇಲ್ಲದಿರಲಿ; ಮಾನವ ಕೂದಲಿನ ತ್ಯಾಜ್ಯ |
| 31. | 0506 | ಎಲ್ಲಾ ಸರಕುಗಳು ಅಂದರೆ ರೂಪುಗೊಡದ, ಕೊಬ್ಬಿನಾಂಶ ತೆಗೆದ, ಸರಳವಾಗಿ ತಯಾರಿಸಿದ (ಆದರೆ ಆಕಾರ ನೀಡುವಿಕೆಗಾಗಿ ಕತ್ತರಿಸದ), ಆಮ್ಲ ಅಥವಾ ಜಿಲಟಿನೀಕರಣದೊಂದಿಗೆ ಸಂಸ್ಕರಿಸಿದ ಮೂಳೆಗಳು ಮತ್ತು ಕೋಡು–ಗೊರಟೆಗಳು, ಈ ಉತ್ಪನ್ನಗಳ ಪುಡಿ ಮತ್ತು ತ್ಯಾಜ್ಯ |
| 32. | 0507 90 | ಎಲ್ಲಾ ಸರಕುಗಳು ಅಂದರೆ ಗೊರಸಿನ ಆಹಾರ; ಕೊಂಬಿನ ಆಹಾರ; ಗೊರಸುಗಳು, ಪಕ್ಷಿಗಳ ಉಗುರು, ಉಗುರುಗಳು ಮತ್ತು ಕೊಕ್ಕುಗಳು; ಕವಲ್ಗೊಂಬು; ಇತ್ಯಾದಿ |
| 33. | 0511 | ಹೆಪ್ಪುಗಟ್ಟಿಸಿದ ವೀರ್ಯ ಒಳಗೊಂಡಂತೆ ವೀರ್ಯ |
| 34. | 6 | ಸಜೀವ ಮರಗಳು ಮತ್ತು ಇತರೇ ಸಸ್ಯಗಳು; ಗೆಡ್ಡೆಗಳು, ಬೇರುಗಳು ಮತ್ತು ಅದೇ ರೀತಿಯವು; ಕತ್ತರಿಸಿದ ಹೂವುಗಳು ಮತ್ತು ಅಲಂಕಾರಿಕ ಎಲೆಗಳು |
| 35. | 0701 | ತಾಜಾ ಅಥವಾ ಶೀತಲೀಕರಿಸಿದ ಆಲೂಗಡ್ಡೆ |
| 36. | 0702 | ತಾಜಾ ಅಥವಾ ಶೀತಲೀಕರಿಸಿದ ಟೊಮೇಟೋ, |
| 37. | 0703 | ತಾಜಾ ಅಥವಾ ಶೀತಲೀಕರಿಸಿದ ಈರುಳ್ಳಿ, ಸಣ್ಣ ಈರುಳ್ಳಿ, ಬೆಳ್ಳುಳ್ಳಿ, ಲೀಕ್‌ಗಳು ಮತ್ತು ಇತರೇ ಅಲಿಯಾಸಿಯಸ್ ತರಕಾರಿಗಳು |

| ಕ್ರ.ಸಂ. | ಅಧ್ಯಾಯ/ಶಿರೋನಾಮೆ/ ಉಪ–ಶಿರೋನಾಮೆ/ ದರದ ವಸ್ತು | ಸರಕುಗಳ ವಿವರ |
|---|---|---|
| (1) | (2) | (3) |
| 38. | 0704 | ತಾಜಾ ಅಥವಾ ಶೀತಲೀಕರಿಸಿದ ಎಲೆ ಕೋಸು, ಹೂ ಕೋಸು, ಗೆಡ್ಡೆ ಕೋಸು, ಕೇಲ್ ಮತ್ತು ಅದೇ ರೀತಿಯ ಖಾದ್ಯ ಬ್ರಾಸ್ಸಿಕಾಗಳು |
| 39. | 0705 | ತಾಜಾ ಅಥವಾ ಶೀತಲೀಕರಿಸಿದ ಲೆಟ್ಯೂಸ್ (ಲಾಕ್ಟುಸಾಸ್ಟಿವಾ) ಮತ್ತು ಚಿಕೋರಿ (ಚಿಕೋರಿಯಂ ಎಸ್‌ಪಿಪಿ.) |
| 40. | 0706 | ತಾಜಾ ಅಥವಾ ಶೀತಲೀಕರಿಸಿದ ಕ್ಯಾರೆಟ್, ಟರ್ನಿಫ್‌ಗಳು, ಸಲಾಡ್ ಬೀಟ್‌ರೋಟ್,ಸಾಲ್ಸಿಫಿ, ಸೆಲೆರಿಯಾಕ್, ಕೆಂಪು ಮೂಲಂಗಿ ಮತ್ತು ಅದೇ ರೀತಿಯ ಖಾದ್ಯ ಬೇರುಗಳು |
| 41. | 0707 | ತಾಜಾ ಅಥವಾ ಶೀತಲೀಕರಿಸಿದ ಸೌತೆಕಾಯಿ ಮತ್ತು ಘರ್ಕಿನ್‌ಗಳು |
| 42. | 0708 | ತಾಜಾ ಅಥವಾ ಶೀತಲೀಕರಿಸಿದ ಸಿಪ್ಪೆಯಿರುವ ಅಥವಾ ಸಿಪ್ಪೆಯಿಲ್ಲದ, ದ್ವಿದಳ ಧಾನ್ಯಗಳ ತರಕಾರಿಗಳು |
| 43. | 0709 | ತಾಜಾ ಅಥವಾ ಶೀತಲೀಕರಿಸಿದ ಇತರೇ ತರಕಾರಿಗಳು |
| 44. | 0712 | ಪೂರ್ಣವಾಗಿರುವ, ಕತ್ತರಿಸಿದ, ಎಳೆಯಾಗಿ ತೆಗೆದ ಅಥವಾ ಮುರಿದ ಅಥವಾ ಪುಡಿ ರೂಪದಲ್ಲಿರುವ ಆದರೆ ಮತ್ತಷ್ಟು ಸಜ್ಜುಗೊಳಿಸದ ಒಣಗಿದ ತರಕಾರಿಗಳು, |
| 45. | 0713 | ಒಣಗಿದ ದ್ವಿದಳ ತರಕಾರಿಗಳು, ಸಿಪ್ಪೆಯುಳ್ಳವು, ಸಿಪ್ಪೆ ತೆಗೆದಿರಲಿ ಅಥವಾ ಸೀಳಿರಲಿ ಅಥವಾ ಇಲ್ಲದಿರಲಿ |
| 46. | 0714 | ತಾಜಾ ಅಥವಾ ಶೀತಲೀಕರಿಸಿದ ಮರಗೆಣಸು, ಸಿಹಿ ಗೆಣಸು, ಸಾಲಾಮಿಸ್ರಿ, ಜೆರೂಸಲೇಂ ಆರ್ಟಿಚೋಕ್ಸ್, ಮತ್ತು ಸಿಹಿಗೆಣಸು, ಅತಿ ಹೆಚ್ಚಿನ ಪಿಷ್ಟವನ್ನು ಅಥವಾ ಇನ್ಯೂಲಿನ್ ಅಂಶವನ್ನು ಹೊಂದಿರುವ ಅದೇ ರೀತಿಯ ಬೇರುಗಳು ಮತ್ತು ಗೆಡ್ಡೆಗಳು; ಸಬ್ಬಕ್ಕಿ ತಿರುಳು |
| 47. | 0801 | ತಾಜಾ ಅಥವಾ ಒಣಗಿದ ತೆಂಗಿನಕಾಯಿಗಳು, ಸಿಪ್ಪೆಯಿರಲಿ ಅಥವಾ ಇಲ್ಲದರಲಿ, ಅಥವಾ ಸಿಪ್ಪೆ ತೆಗೆದಿರಲಿ. |
| 48. | 0801 | ತಾಜಾ ಬ್ರೆಜಿಲ್ ಬೀಜಗಳು, ಸಿಪ್ಪೆಯಿರಲಿ ಅಥವಾ ಇಲ್ಲದರಲಿ, ಅಥವಾ ಸಿಪ್ಪೆ ತೆಗೆದಿರಲಿ. |
| 49. | 0802 | ತಾಜಾ, ಇತರೇ ಬೀಜಗಳು, ಅವುಗಳೆಂದರೆ, ಬಾದಾಮಿ, ಹೇಸಲ್ ಅಥವಾ ಹೇಸಲ್ ಚಿಪ್ಪು ಕಾಯಿಗಳು(ಕೊರಿಯಸ್ ಎಸ್‌ಪಿಪಿ), ವಾಲ್ನಟ್‌ಗಳು, ಚೆಸ್ಟ್‌ನಟ್‌ಗಳು (ಕ್ಯಾಸ್ಟಾನಿಯಾ ಎಸ್‌ಪಿಪಿ), ಫಿಸ್ತ, ಮಕಾಡೆಮೀಯ ನಟ್‌ಗಳು, ಕೋಲಾ ನಟ್‌ಗಳು (ಕೋಲಾ ಎಸ್‌ಪಿಪಿ.) ತಾಜಾ ಅಡಿಕೆಗಳು, ಸಿಪ್ಪೆಯಿರಲಿ ಅಥವಾ |
| 50. | 0803 | ತಾಜಾ ಅಥವಾ ಒಣಗಿದ ಬಾಳೆಗಿಡ ಒಳಗೊಂಡಂತೆ ಬಾಳೆಹಣ್ಣುಗಳು |
| 51. | 0804 | ತಾಜಾ ಖರ್ಜೂರ, ಅಂಜೂರ, ಅನಾನಸ್, ಅವೋಕಾಡೋ, ಸೀಬೆ, ಮಾವಿನಹಣ್ಣು ಮತ್ತು ಮ್ಯಾಂಗೋಸ್ಟೀನ್‌ಗಳು, |
| 52. | 0805 | ತಾಜಾ ಸಿಟ್ರಸ್ ಹಣ್ಣುಗಳು ಅವುಗಳೆಂದರೆ, ಕಿತ್ತಳೆಹಣ್ಣುಗಳು, ಮಂಡರಿನ್‌ಗಳು (ಟಾಂಜರಿನ್‌ಗಳು ಮತ್ತು ಸತ್ಸುಮಾಗಳು); ಕ್ಲೆಮೆಂಟೀನ್‌ಗಳು, ವಿಲ್ಕಿಂಗ್‌ಗಳು ಮತ್ತು ಅದೇ ರೀತಿಯ ಸಿಟ್ರಸ್ ಹೈಬ್ರಿಡ್‌ಗಳು, ಪೊಮೆಲೋಸ್, ನಿಂಬೆಹಣ್ಣುಗಳು (ಸಿಟ್ರಸ್ ಲಿಮನ್, ಸಿಟ್ರಸ್ ಲಿಮೋನಮ್) ಮತ್ತು ಲೈಮ್‌ಗಳು (ಸಿಟ್ರಸ್ ಔರಾಂಟಿಫೋಲಿಯಾ, ಸಿಟ್ರಸ್ ಲ್ಯಾಟಿಫೋಲಿಯಾ) ಒಳಗೊಂಡಂತೆ ದ್ರಾಕ್ಷಿಹಣ್ಣು |
| 53. | 0806 | ತಾಜಾ ದ್ರಾಕ್ಷಿ |
| 54. | 0807 | ತಾಜಾ ಮೆಲನ್‌ಗಳು (ಕಲ್ಲಂಗಡಿ ಹಣ್ಣುಗಳನ್ನು ಒಳಗೊಂಡಂತೆ) ಮತ್ತು ಪರಂಗಿಹಣ್ಣು (ಪಪ್ಪಾಯಗಳು) |
| 55. | 0808 | ತಾಜಾ ಸೇಬುಗಳು, ಪೇರಳೆಗಳು, ಮತ್ತು ಶ್ರೀಫಲ |
| 56. | 0809 | ತಾಜಾ ಜಲ್ದರು ಹಣ್ಣುಗಳು, ಚೆರಿ ಹಣ್ಣುಗಳು, ಪೀಚ್ ಹಣ್ಣುಗಳು (ನೆಕ್ಟರಿನ್‌ಗಳನ್ನು ಒಳಗೊಂಡು) ಪ್ಲಮ್ |
| 57. | 0810 | ತಾಜಾ, ಇತರೆ ಹಣ್ಣುಗಳು, ಸ್ಟ್ರಾಬೆರ್ರೀಸ್, ರಾಸ್‌ಬೆರ್ರೀಸ್ , ಬ್ಲಾಕ್‌ಬೆರ್ರೀಸ್ , ಮಲ್‌ಬೆರ್ರೀಸ್ ಮತ್ತು ಲೋಗನ್‌ಬೆರ್ರೀಸ್, ಕಪ್ಪು, ಬಿಳಿ ಅಥವಾ ಕೆಂಪುಬಣ್ಣದ ಕರ್ರಂಟ್ಸ್ ಮತ್ತು ಗೂಸ್‌ಬೆರ್ರೀಸ್, ಕ್ರಾನ್‌ಬೆರ್ರೀಸ್, ಬಿಲ್‌ಬೆರ್ರೀಸ್ ಮತ್ತು ಇತರೆ ವಕ್ಸಿನೀಯಮ್ ಕುಲದ ಹಣ್ಣುಗಳು, ಕಿವಿಹಣ್ಣು, ಡುರ್ಯಾನ್ಸ್, ಪರ್ಸಿಮನ್ಸ್, ದಾಳಿಂಬೆ ಹಣ್ಣುಗಳು, ಹುಣಸೆ ಹಣ್ಣು, ಸಪೋಟಾ (ಚಿಕೊ), ಸೀತಾಫಲ (ಅಟ), ಬೋರ್, ಲೀಚಿ |
| 58. | 0814 | ಸಿಟ್‌ರಸ್ ಹಣ್ಣು ಅಥವಾ ಕಲ್ಲಂಗಡಿಗಳ (ಕಲ್ಲಂಗಡಿ ಹಣ್ಣು ಸಹಿತ) ಸಿಪ್ಪೆಗಳು, ತಾಜಾ, |
| 59. | 9 | ಬಿತ್ತನೆ ಗುಣದ ಎಲ್ಲಾ ಸರಕುಗಳು |
| 60. | 0901 | ಹುರಿದಿಲ್ಲದ ಕಾಫೀ ಬೀಜಗಳು |
| 61. | 0902 | ಸಂಸ್ಕರಿಸದ ಹಸಿರು ಎಲೆಗಳು |
| 62. | 0909 | ಸೋಂಪು ಗಿಡ, ಚಕ್ರಮೊಗ್ಗು, ಸೋಂಪು, ಕೊತ್ತಂಬರಿ, ಜೀರಿಗೆ, ಅಥವಾ ಸೀಮೆ ಸೋಂಪು ಬೀಜಗಳು; ಶಂಕುಫಲಿ ಹಣ್ಣುಗಳು [ಬಿತ್ತನೆ ಗುಣದವುಗಳು] |
| 63. | 0910 11 10 | ಸಂಸ್ಕರಿಸಿರುವ ರೂಪದಲ್ಲಿರುವುದನ್ನು ಹೊರತುಪಡಿಸಿದ ಹಸಿ ಶುಂಠಿ |
| 64. | 0910 30 10 | ಸಂಸ್ಕರಿಸಿರುವ ರೂಪದಲ್ಲಿರುವುದನ್ನು ಹೊರತುಪಡಿಸಿದ ಹಸಿ ಅರಿಶಿಣ |

| | | |
|---|---|---|
| 65. | 1001 | ಗೋಧಿ ಮತ್ತು ಗೋಧಿ ಹಿಟ್ಟು. [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 66. | 1002 | ಸಣ್ಣ ಗೋಧಿ [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 67. | 1003 | ಬಾರ್ಲಿ [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 68. | 1004 | ಜವೆ ಗೋಧಿ [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 69. | 1005 | ಮೆಕ್ಕೆ ಜೋಳ (ಕಾರ್ನ್) [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 70. | 1006 | ಅಕ್ಕಿ [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 71. | 1007 | ಹುಲ್ಲು ಜೋಳ [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 72. | 1008 | ಹುರುಳಿ, ಧಾನ್ಯಗಳು, ಮತ್ತು ಮಸಾಲೆ ಬೀಜಗಳು; ಜೋಳ, ಸಜ್ಜೆ, ರಾಗಿ ಮುಂತಾದ ಇತರೆ ಧಾನ್ಯಗಳು [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 73. | 1101 | ಗೋಧಿ ಅಥವಾ ಮೆಸ್ಲೀನ್ ಹಿಟ್ಟು [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 74. | 1102 | ಗೋಧಿಯ ಅಥವಾ ಮೆಸ್ಲೀನ್‌ನ ಹಿಟ್ಟನ್ನು ಹೊರತುಪಡಿಸಿದ ಧಾನ್ಯದ ಹಿಟ್ಟುಗಳು [ಮೆಕ್ಕೆ ಜೋಳ(ಕಾರ್ನ್) ಹಿಟ್ಟು, ಸಣ್ಣ ಗೋಧಿ ಹಿಟ್ಟು ಇತ್ಯಾದಿ.] [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 75. | 1103 | ಹೊಟ್ಟು ತೆಗೆದ ಧಾನ್ಯಗಳ ಹಿಟ್ಟು ಮತ್ತು ಪೆಲೆಟ್‌ಗಳು [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 76. | 1104 | ಸುಲಿದ ಧಾನ್ಯದ ಕಾಳುಗಳು |
| 77. | 1105 | ಆಲೂಗಡ್ಡೆಗಳ ಹಿಟ್ಟು [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 78. | 1106 | ಶಿರೋನಾಮೆ 0713ರಲ್ಲಿನ (ದ್ವಿದಳಗಳು) [ಗೌರ್ ಮೀಲ್ 1106 10 10 ಮತ್ತು ಗೌರ್ ಗಮ್‌ನ ಸಂಸ್ಕರಿಸಿದ ಸೀಳು 1106 10 90ನ್ನು ಹೊರತುಪಡಿಸಿದಂತೆ] ದ್ವಿದಳ ಒಣ ತರಕಾರಿಗಳ, ಶೀರ್ಷಿಕೆ 0714ರಲ್ಲಿನ ಸಬ್ಬಕ್ಕಿಯ ಅಥವಾ ಬೇರುಗಳ ಅಥವಾ ಗಡ್ಡೆಗಳ ಅಥವಾ ಅಧ್ಯಾಯ 8 ಉತ್ಪನ್ನಗಳ ಧಾನ್ಯದ ಹಿಟ್ಟು, ಅಂದರೆ ಹುಣಸೆ ಹಣ್ಣಿನ, ಸಿಂಗೋಡಾದ, ಮಾವಿನ ಹಣ್ಣಿನ ಹಿಟ್ಟು, ಇತ್ಯಾದಿ, [ಅಳತೆಯ ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 79. | 12 | ಬಿತ್ತನೆ ಗುಣದ ಎಲ್ಲಾ ಸರಕುಗಳು |
| 80. | 1201 | ಬಿತ್ತನೆಯ ಗುಣದ ಸೋಯ ಅವರೆಗಳು, ಚೂರು ಮಾಡಿರಲಿ ಅಥವಾ ಇಲ್ಲದಿರಲಿ |
| 81. | 1202 | ಹುರಿದಿಲ್ಲದ ಅಥವಾ ಅನ್ಯಥಾ ಬೆಂದಿರದ, ಬಿತ್ತನೆಯ ಗುಣದ ಕಡಲೆ ಬೀಜಗಳು, ಸಿಪ್ಪೆ ತೆಗೆದಿರಲಿ ಅಥವಾ ಚೂರು ಮಾಡಿರಲಿ ಅಥವಾ ಇಲ್ಲದಿರಲಿ |
| 82. | 1204 | ಬಿತ್ತನೆಯ ಗುಣದ ಅಗಸೆ ಬೀಜ, ಚೂರು ಮಾಡಿರಲಿ ಅಥವಾ ಇಲ್ಲದಿರಲಿ |
| 83. | 1205 | ಬಿತ್ತನೆಯ ಗುಣದ ರೇಪ್ ಅಥವಾ ಕೋಲ್ ಬೀಜ, ಚೂರು ಮಾಡಿರಲಿ ಅಥವಾ ಇಲ್ಲದಿರಲಿ |
| 84. | 1206 | ಬಿತ್ತನೆಯ ಗುಣದ ಸೂರ್ಯಕಾಂತಿ ಬೀಜ, ಚೂರು ಮಾಡಿರಲಿ ಅಥವಾ ಇಲ್ಲದಿರಲಿ |
| 85. | 1207 | ಬಿತ್ತನೆಯ ಗುಣದ ಇತರೆ ತೈಲ ಬೀಜಗಳು ಮತ್ತು ತೈಲದಾಯಕ ಹಣ್ಣುಗಳು (ಅಂದರೆ, ತಾಳೆ ಬೀಜಗಳು ಮತ್ತು ತಾಳೆ ಕಾಳುಗಳು, ಹತ್ತಿ ಬೀಜಗಳು, ಹರಳೆ ಎಣ್ಣೆ ಬೀಜಗಳು, ಎಳ್ಳು ಬೀಜಗಳು, ಕುಸುಂಬೆ ಕಾಳು (ಕಾರ್ಥೋರ್ಮಸ್ಪಿಂಕ್ಟೋರಿಯಸ್) ಬೀಜಗಳು, ಕಲ್ಲಂಗಡಿ ಬೀಜಗಳು, ಅಜಂ ಬೀಜಗಳು, ಮಾವಿನ ಓಟೆ, ಉಚ್ಚೆಳ್ಳು ಬೀಜಗಳು, ಮುನಮುಕಳೆ), ಚೂರು ಮಾಡಿರಲಿ ಅಥವಾ ಇಲ್ಲದಿರಲಿ |
| 86. | 1209 | ಬಿತ್ತನೆಗಾಗಿ ಬಳಸುವ ಬೀಜಗಳು, ಹಣ್ಣು ಮತ್ತು ಬೀಜಕಗಳು |
| 87. | 1210 | ತಾಜಾ ಹಾಪ್ ಕೋನ್‌ಗಳು |

| | | |
|---|---|---|
| 88. | 1211 | ಪ್ರಾಥಮಿಕವಾಗಿ ಸುಗಂದದಲ್ಲಿ, ಔಷದದಲ್ಲಿ ಅಥವ ಕೀಟ ನಾಶಕವಾಗಿ, ಶಿಲೀಂದ್ರ ನಾಶಕ ಅಥವ ಅದೇ ತರಹ ಉದ್ದೇಶಕ್ಕಾಗಿ ಬಳಸುವ  ತಾಜಾ ಅಥವಾ ಶೀತಲೀಕರಿಸಿದ ಗಿಡಗಳು ಮತ್ತು ಗಿಡಗಳ ಭಾಗಗಳು(ಬೀಜ ಮತ್ತು ಹಣ್ಣುಗಳನ್ನು ಒಳಗೊಂಡಂತೆ). |
| 89. | 1212 | ತಾಜಾ ಅಥವಾ ಶೀತಲೀಕರಿಸಿದ ಲೋಕಸ್ಟ್ ಬೀನ್ಸ್, ಕಡಲ ಕಳೆ ಮತ್ತು ಇತರೆ ಪಾಚಿ, ಸಕ್ಕರೆ ಬೀಟ್ ಮತ್ತು [illegible] |
| 90. | 1213 | ಸಿದ್ದಪಡಿಸದಿರುವ ಏಕದಳ ಹುಲ್ಲು ಮತ್ತು ಸಿಪ್ಪೆಗಳು, ಕತ್ತರಿಸಿರಲಿ ಅಥವಾ ಅರೆದಿರಲಿ, ಒತ್ತಿರಲಿ ಅಥವಾ ಉಂಡೆಗಳ ರೂಪದಲ್ಲಿರಲಿ ಅಥವಾ ಇಲ್ಲದಿರಲಿ |
| 91. | 1214 | ಸ್ವೀಡಸ್, ಮ್ಯಾಂಗೋಲ್ಡ್ಸ್, ಮೇವು ಬೇರುಗಳು, ಒಣ ಹುಲ್ಲು, ಲೂಸೆರ್ನ್(ಅಲ್‌ಫಾಫಾ), ಕ್ಲೋವರ್, ಸೈನ್ಫಾಯಿನ್, ಕೇಲ್ ಮೇವು, ನೀಲ, ವೆಟ್ಸ್ ಮತ್ತು ಅದೇ ರೀತಿಯ ಮೇವು ಉತ್ಪನ್ನಗಳು, ಪೆಲೆಟ್‌ಗಳ ರೂಪದಲ್ಲಿರಲಿ ಅಥವಾ ಇಲ್ಲದಿರಲಿ |
| 92. | 1301 | ಅರಗು ಮತ್ತು ಶುದ್ಧ ಅರಗು |
| 93. | 1404 90 40 | ವೀಳ್ಯದ ಎಲೆಗಳು |
| 94. | 1701 or 1702 | ಕಬ್ಬಿನ ಬೆಲ್ಲ (ಗುಡ) ಮತ್ತು ತಾಳೆ ಮರದ ಬೆಲ್ಲವನ್ನು ಒಳಗೊಂಡಂತೆ ಎಲ್ಲಾ ಬಗೆಯ ಬೆಲ್ಲ |
| 95. | 1904 | ಸಾಮಾನ್ಯವಾಗಿ ಮುರಿ ಎಂದು ಕರೆಯಲಾಗುವ, ಮಂಡಕ್ಕಿ, ಸಾಮಾನ್ಯವಾಗಿ ಚಿರಾ ಎಂದು ಕರೆಯಲಾಗುವ ಚಪ್ಪಟೆ ಅಥವಾ ಒಡೆದ ಅಕ್ಕಿ, ಸಾಮಾನ್ಯವಾಗಿ ಖೋಯಿ ಎಂದು ಕರೆಯಲಾಗುವ ಹುರಿದ ಅಕ್ಕಿ, ಸಾಮಾನ್ಯವಾಗಿ ಮುರ್ಕಿ ಎಂದು ಕರೆಯಲಾಗುವ, ಸಕ್ಕರೆ ಅಥವಾ ಬೆಲ್ಲದಿಂದ ಲೇಪಿತವಾದ ಹುರಿದ ಭತ್ತ ಅಥವಾ ಅಕ್ಕಿ |
| 96. | 1905 | ಹಪ್ಪಳ |
| 97. | 1905 | ಬ್ರೆಡ್ (ಬ್ರಾಂಡ್‌ನದು ಅಥವಾ ಅನ್ಯಥಾ), ಸೇವನೆಗಾಗಿ ಮತ್ತು  ಫಿಜ್ಜಾ ಬ್ರೆಡ್‌ಗಾಗಿ ಸರ್ವ್ ಮಾಡಿದಾಗ ಅದನ್ನು ಹೊರತುಪಡಿಸಿದಂತೆ |
| 98. | 2201 | ನೀರು [ ವಾಯುಯಕ್ತ, ಖನಿಜಯುಕ್ತ, ಶುದ್ಧೀಕರಿಸಿದ, ಬಟ್ಟಿ ಇಳಿಸಿದ, ಔಷಧೀಯ, ಅಯಾನಿಕ್, ಬ್ಯಾಟರಿ, ಖನಿಜರಹಿತಗೊಳಿಸಿದ ಮತ್ತು ಮೊಹರಿನ ಧಾರಕಗಳಲ್ಲಿ ಮಾರಾಟ ಮಾಡುವ ನೀರನ್ನು ಹೊರತುಪಡಿಸಿದಂತೆ] |
| 99. | 2201 | ಖರ್ಜೂರ ಮತ್ತು ತಾಳೆ ನೀರಾ ಒಳಗೊಂಡಂತೆ, ಅಲ್ಕೋಹಾಲೇತರ ಹೆಂಡ, ನೀರ |
| 100. | 2202 90 90 | ಅಳತೆಯ  ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದ ಎಳನೀರು |
| 101. | 2302, 2304, 2305, 2306, 2308, 2309 | ಹುಲ್ಲು, ಒಣಹುಲ್ಲು ಮತ್ತು ಮೇವು, ದ್ವಿದಳಗಳ ಪೂರಕಗಳು ಮತ್ತು ಸಿಪ್ಪೆ, ಸಾಂದ್ರಣ & ಸೇರ್ಪಡೆಗಳು, ಗೋದಿ ಹೊಟ್ಟು ಮತ್ತು ಎಣ್ಣೆ ತೆಗೆದ ಹಿಂಡಿಯನ್ನು ಒಳಗೊಂಡಿರುವ ಸೀಗಡಿ ಆಹಾರ ಮತ್ತು ಪ್ರಾನ್ ಆಹಾರವನ್ನು ಒಳಗೊಂಡ ಮೀನಿನ ಆಹಾರ, ಕೋಳಿಯ ಆಹಾರ ಮತ್ತು ಜಾನುವಾರುಗಳ ಆಹಾರ |
| 102. | 2501 | ಎಲ್ಲಾ ಬಗೆಯ ಉಪ್ಪುಗಳು |
| 103. | 2835 | ಐಎಸ್ ವಿವರಣ ಸಂ.5470 : 2002ಕ್ಕೆ ಅನುಗುಣವಾಗಿರುವ ಪ್ರಾಣಿಗಳ ಫೀಡ್ ಗ್ರೇಡ್‌ನ ಡಿಕ್ಯಾಲ್ಸಿಯಮ್ ಫಾಸ್ಫೇಟ್ (ಡಿಸಿಪಿ) |
| 104. | 3002 | ಮಾನವ ರಕ್ತ ಮತ್ತು ಅದರ ಘಟಕಗಳು |
| 105. | 3006 | ಎಲ್ಲಾ ಬಗೆಯ ಗರ್ಭನಿರೋಧಕಗಳು |
| 106. | 3101 | ಎಲ್ಲಾ ಸರಕುಗಳು ಮತ್ತು ಜೈವಿಕ ಗೊಬ್ಬರ [ಅಳತೆಯ  ಧಾರಕದಲ್ಲಿಟ್ಟಿರುವ ಮತ್ತು ನೋಂದಾಯಿತ ಬ್ರಾಂಡಿನ ಹೆಸರನ್ನು ಹೊಂದಿರುವುದನ್ನು ಹೊರತುಪಡಿಸಿದಂತೆ] |
| 107. | 3304 | ಕಾಜಲ್ [ಕಾಜಲ್ ಪೆನ್ಸಿಲ್ ಕಡ್ಡಿಗಳನ್ನು ಹೊರತುಪಡಿಸಿದಂತೆ], ಕುಂಕುಮ, ಬಿಂದಿ, ಸಿಂಧೂರ, ಆಲ್ಟಾ |
| 108. | 3825 | ಮುನ್ಸಿಪಲ್ ತ್ಯಾಜ್ಯ, ಒಳಚರಂಡಿ ಕೆಸರು, ಕ್ಲಿನಿಕಲ್ ತ್ಯಾಜ್ಯ |
| 109. | 3926 | ಪ್ಲಾಸ್ಟಿಕ್ ಬಳೆಗಳು |
| 110. | 4014 | ಕಾಂಡೋಮ್‌ಗಳು ಮತ್ತು ಗರ್ಭನಿರೋಧಕಗಳು |
| 111. | 4401 | ಉರುವಲು ಮತ್ತು ಇಂಧನ ಕಟ್ಟಿಗೆ |
| 112. | 4402 | ಮರದ ಇದ್ದಿಲು (ಚಿಪ್ಪು ಅಥವಾ ನಟ್ ಇದ್ದಿಲು ಒಳಗೊಂಡಂತೆ), ಒಟ್ಟುಗೂಡಿಸಿರಲಿ ಅಥವಾ ಇಲ್ಲದಿರಲಿ |
| 113. | 4802 / 4907 | ನ್ಯಾಯಾಂಗ, ನ್ಯಾಯಾಂಗೇತರ ಚಾಪಾ ಕಾಗದ, ನ್ಯಾಯಾಲಯದ ಶುಲ್ಕದ ಸ್ಟಾಂಪ್‌ಗಳು, ಸರ್ಕಾರದ ಖಜಾನೆಗಳಿಂದ ಅಥವಾ ಸರ್ಕಾರ ಪ್ರಾಧಿಕೃತಗೊಳಿಸಿದ ಮಾರಾಟಗಾರರಿಂದ ಮಾರಾಟವಾದಾಗ |
| 114. | 4817 / 4907 | ಸರ್ಕಾರದಿಂದ ಮಾರಾಟವಾಗುವ ಅಂಚೆಯ ವಸ್ತುಗಳು, ಲಕೋಟೆ, ಅಂಚೆ ಕಾರ್ಡು ಇತ್ಯಾದಿ., |
| 115. | 48 / 4907 | ರೂಪಾಯಿ ನೋಟುಗಳು, ಭಾರತೀಯ ರಿಸರ್ವ್ ಬ್ಯಾಂಕಿಗೆ ಮಾರಾಟವಾದಾಗ |
| 116. | 4907 | ಬಿಡಿಯಾದ ಅಥವಾ ಪುಸ್ತಕದ ರೂಪದಲ್ಲಿರುವ ಚೆಕ್ಕುಗಳು |

| | | |
|---|---|---|
| 117. | 4901 | ಮುದ್ರಿತ ಪುಸ್ತಕಗಳು, ಬ್ರೈಲಿ ಪುಸ್ತಕಗಳನ್ನು ಒಳಗೊಂಡಂತೆ |
| 118. | 4902 | ವರ್ತಮಾನ ಪತ್ರಿಕೆಗಳು, ಜರ್ನಲ್‌ಗಳು ಮತ್ತು ನಿಯತಕಾಲಿಕೆಗಳು, ಜಾಹೀರಾತು ವಸ್ತುಗಳನ್ನು ಸಚಿತ್ರಗೊಳಿಸಿರಲಿ ಅಥವಾ ಒಳಗೊಂಡಿರಲಿ ಅಥವಾ ಇಲ್ಲದಿರಲಿ |
| 119. | 4903 | ಮಕ್ಕಳ ಚಿತ್ರ, ಡ್ರಾಯಿಂಗ್ ಅಥವಾ ಬಣ್ಣದ ಪುಸ್ತಕಗಳು |
| 120. | 4905 | ಅಟ್ಲಾಸ್‌ಗಳು, ಸ್ಥಳಾಕೃತಿಯ ಯೋಜನೆಗಳು ಮತ್ತು ಗ್ಲೋಬ್‌ಗಳನ್ನು ಒಳಗೊಂಡಂತೆ, ಮುದ್ರಿತ ಭೂಪಟಗಳು ಮತ್ತು ಜಲರೇಖಾಕೃತಿ (ಹೈಡ್ರೋಗ್ರಾಫಿಕ್) ಅಥವಾ ಅದೇ ರೀತಿಯ ಎಲ್ಲಾ ನಕ್ಷೆಗಳು |
| 121. | 5001 | ರೇಷ್ಮೆ ಹುಳು ಸಾಕಾಣಿಕೆ, ರೇಷ್ಮೆಗೂಡು |
| 122. | 5002 | ಕಚ್ಚಾ ರೇಷ್ಮೆ |
| 123. | 5003 | ರೇಷ್ಮೆ ತ್ಯಾಜ್ಯ |
| 124. | 5101 | ಹುರಿ ಮಾಡದ ಅಥವಾ ಬಾಚದ, ಉಣ್ಣೆ |
| 125. | 5102 | ಹುರಿ ಮಾಡದ ಅಥವಾ ಬಾಚದ ಪ್ರಾಣಿಗಳ ನಯವಾದ ಅಥವಾ ಒರಟಾದ ಕೂದಲು |
| 126. | 5103 | ಉಣ್ಣೆಯ ಅಥವಾ ಪ್ರಾಣಿಗಳ ನಯವಾದ ಅಥವಾ ಒರಟಾದ ಕೂದಲಿನ ತ್ಯಾಜ್ಯ |
| 127. | 52 | ಗಾಂಧಿ ಟೋಪಿ |
| 128. | 52 | ಖಾದಿ ನೂಲು |
| 129. | 5303 | ಕಚ್ಚಾ ಅಥವಾ ಸಂಸ್ಕರಿಸಿದುದು ಆದರೆ ಹೊಸೆದಿಲ್ಲದ ಸೆಣಬಿನ ನಾರುಗಳು |
| 130. | 5305 | ತೆಂಗಿನ ನಾರಿನ ಫೈಬರ್ |
| 131. | 63 | ಭಾರತೀಯ ರಾಷ್ಟ್ರ ಧ್ವಜ |
| 132. | 6703 | ಸಜ್ಜುಗೊಳಿಸಿದ, ತೆಳುಮಾಡಿದ, ಬ್ಲೀಚ್‌ಮಾಡಿದ ಅಥವಾ ಅನ್ಯಥಾ ಕಾರ್ಯ ಮಾಡಿದ, ಮಾನವ ಕೂದಲು |
| 133. | 6912 00 40 | ಮಣ್ಣಿನ ಮಡಿಕೆ ಮತ್ತು ಜೇಡಿಮಣ್ಣಿನ ದೀಪಗಳು |
| 134. | 7018 | ಗಾಜಿನ ಬಳೆಗಳು (ಅಮೂಲ್ಯ ಲೋಹಗಳಿಂದ ಮಾಡಿರುವುಗಳನ್ನು ಹೊರತುಪಡಿಸಿದಂತೆ) |
| 135. | 8201 | ಕೈಯಿಂದ ನಡೆಸುವ ಅಥವಾ ಪ್ರಾಣಿಗಳಿಂದ ನಡೆಸುವ ಕೃಷಿ ಉಪಕರಣಗಳು, ಅಂದರೆ, ಸನಿಕೆಗಳು, ಎಲೆಗುದ್ದಲಿಗಳು, ಪಿಕಾಸಿಗಳು, ಪಿಕ್‌ಗಳು, ಹೈಸ್‌ಗಳು, ಕವಲುಗುದ್ದಲಿಗಳು ಮತ್ತು ಕುಂಟೆಗಳು ಮುಂತಾದ ಕೈ ಉಪಕರಣಗಳು; ಕೊಡಲಿಗಳು, ಕೊಕ್ಕೆ ಕುಡುಗೋಲುಗಳು ಮತ್ತು ಅದೇ ರೀತಿಯ ತುಂಡರಿಸುವ ಸಾಧನಗಳು; ಯಾವುದೇ ಬಗೆಯ ಸಮರುಗತ್ತರಿಗಳು ಮತ್ತು ಕಸಿಗತ್ತರಿಗಳು; ಕೃಷಿ, ತೋಟಗಾರಿಕೆ ಅಥವಾ ಅರಣ್ಯಗಾರಿಕೆಯಲ್ಲಿ ಬಳಸಲಾಗುವ ಕುಡುಗೋಲು, ಒಣಹುಲ್ಲಿನ ಚಾಕುಗಳು, ಅಂಚುಕತ್ತರಿಗಳು, ಮರದ ಬೆಣೆಗಳು ಮತ್ತು ಇತರ ಉಪಕರಣಗಳು. |
| 136. | 8445 | ಅಂಬರ ಚರಕ |
| 137. | 8446 | ಕೈಮಗ್ಗ [ನೇಯ್ಗೆ ಯಂತ್ರೋಪಕರಣ] |
| 138. | 8802 60 00 | ಬಾಹ್ಯಕಾಶ ನೌಕೆ (ಉಪಗ್ರಹಗಳನ್ನು ಒಳಗೊಂಡಂತೆ) ಮತ್ತು ಉಪಕಕ್ಷೀಯ ಮತ್ತು ಬಾಹ್ಯಕಾಶ ನೌಕೆಯ ಉಡಾವಣಾ ವಾಹನಗಳು |
| 139. | 8803 | ಶಿರೋನಾಮೆ 8801ರ ಸರಕುಗಳ ಭಾಗಗಳು |
| 140. | 9021 | ಶ್ರವಣ ಸಾಧನಗಳು |
| 141. | 92 | ದೇಶೀಯವಾಗಿ ಕೈಯಿಂದ ನಿರ್ಮಿಸಿದ ಸಂಗೀತ ಉಪಕರಣಗಳು |
| 142. | 9603 | ಸರ್ಕಾಂಡ ಮತ್ತು ಘೂಲ್ಬಹರಿಜಾದೂನಿಂದ ಮಾಡಿದ ಮುದ್ದಾಗಳು |
| 143. | 9609 | ಸ್ಲೇಟ್ ಪೆನ್ಸಿಲ್‌ಗಳು ಮತ್ತು ಸೀಮೆ ಸುಣ್ಣಗಳು |
| 144. | 9610 00 00 | ಸ್ಲೇಟ್‌ಗಳು |

| | | |
|---|---|---|
| 145. | 9803 | ಪ್ರಯಾಣಿಕರ ಬ್ಯಾಗೇಜ್‌ಗಳು |
| 146. | ಯಾವುದೇ ಅಧ್ಯಾಯ | ಪೂಜಾ ಸಾಮಗ್ರಿ, ಅಂದರೆ,–<br>(i) ರುದ್ರಾಕ್ಷಿ, ರುದ್ರಾಕ್ಷಿ ಮಾಲೆ, ತುಳಸಿಕಾಂತಿ ಮಾಲೆ, ಪಂಚಗವ್ಯ (ಹಸುವಿನ ಸಗಣಿ, ದೇಸೀ ತುಪ್ಪ, ಹಾಲು ಮತ್ತು ಮೊಸರಿನ ಮಿಶ್ರಣ)<br>(ii) ಪವಿತ್ರ ದಾರ (ಸಾಮಾನ್ಯವಾಗಿ ಯಜ್ಞೋ ಪವಿತ್ರಂ ಎಂದು ಕರೆಯಲಾಗುತ್ತದೆ)<br>(iii) ಮರದ ಪಾದರಕ್ಷೆ<br>(iv) ಪಂಚಾಮೃತ<br>(v) ಧಾರ್ಮಿಕ ಸಂಸ್ಥೆಗಳಿಂದ ಮಾರಾಟ ಮಾಡುವ ವಿಭೂತಿ<br>(vi) ಬ್ರಾಂಡ್‌ಅಲ್ಲದ ಜೇನು [ ಪ್ರಸ್ತಾವಿತ ಜಿಎಸ್‌ಟಿ ಇಲ್ಲದ]<br>(vii)ದೀಪದ ಬತ್ತಿ<br>(viii)ರೋಲಿ<br>(ix)ಕಲಾವ (ರಕ್ಷಾ ಸೂತ್ರ)<br>(x) ಚಂದನ ತಿಲಕ |
| 147. | | ದೇಶೀಯ ಗೃಹಬಳಕೆ ಬಳಕೆದಾರರಿಗೆ ಅಥವಾ ಗೃಹಬಳಕೆಯಲ್ಲದ ವಿನಾಯಿತಿ ವರ್ಗದ(NDEC) ಗ್ರಾಹಕರುಗಳಿಗೆ ಪೂರೈಕೆ ಮಾಡುವದ್ರವೀಕೃತ ಪೆಟ್ರೋಲಿಯಂ ಅನಿಲಗಳು. |
| 148. | | ಪಿಡಿಎಸ್ ಅಡಿಯಲ್ಲಿನ ಸೀಮೆಎಣ್ಣೆ ತೈಲ |
| 149. | | ಅಂಚೆಗಳ ಇಲಾಖೆಯಿಂದ  ಸಾಗಾಣಿಕೆ ಮಾಡಲಾದ ಅಂಚೆಯ ಬ್ಯಾಗೇಜ್ |
| 150. | | ನೈಸರ್ಗಿಕ ಅಥವಾ ಕೃಷಿಮಾಡಿದ ಮುತ್ತುಗಳು ಮತ್ತು ಅಮೂಲ್ಯ ಅಥವಾ ಅರೆ ಅಮೂಲ್ಯ ಹರಳುಗಳು; ಅಮೂಲ್ಯ ಲೋಹಗಳು ತಮ್ಮು ಅಮೂಲ್ಯ ಲೋಹ ಲೇಪಿತವಾದ ಲೋಹಗಳು (ಅಧ್ಯಾಯ–71) |
| 151. | | ಚಿನ್ನದ ಕೆಲಸಗಾರರ ಅಥವಾ ಬೆಳ್ಳಿ ಕೆಲಸಗಾರರ ಸಲಕರಣೆಗಳ ಪರಿಕರಗಳು ಮತ್ತು ಇತರೇ ಪರಿಕರಗಳು (ಅಧ್ಯಾಯ–71) |
| 152. | | ನೋಟು |
| 153. | | ಬಳಕೆಮಾಡಿದ ವೈಯಕ್ತಿಕ ಮತ್ತು ಗೃಹಬಳಕೆಯ ಪರಿಣಾಮಗಳು |
| 154. | | ರೂಪುಗೊಡದ ಹವಳ (0508) ಮತ್ತು ರೂಪುನೀಡಿರುವ ಹವಳ (9601) |

**138ಎ. ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ತೆಗೆದುಕೊಂಡು ಹೋಗಬಹುದಾದ ದಸ್ತಾವೇಜುಗಳು ಮತ್ತು ಸಾಧನಗಳು.–** (1) ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ಕೆಳಕಂಡವುಗಳನ್ನು ತೆಗೆದುಕೊಂಡು ಹೋಗತಕ್ಕದ್ದು–

(ಎ) ಪೂರೈಕೆಯ ಬೆಲೆಪಟ್ಟಿ ಅಥವಾ ಬಿಲ್ಲು ಅಥವಾ ಸಂದರ್ಭಾನುಸಾರವಾಗಿ ಬಟವಾಡೆ ಚಲನ್: ಮತ್ತು

(ಬಿ) ಇ–ವೇ ಬಿಲ್ಲಿನ ಒಂದು ಪ್ರತಿ ಅಥವಾ ಇ–ವೇ ಬಿಲ್ಲಿನ ಸಂಖ್ಯೆ, ಭೌತಿಕವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಬಹುದಾ ಅಂಥ ವಿಧಾನದಲ್ಲಿ ಸಾಗಾಣಿಕೆ ವಾಹನಕ್ಕೆ ಅಳವಡಿಸಲಾದ ರೇಡಿಯೋ ಆವೃತ್ತಿ ಗುರುತು ಸಾಧನಕ್ಕೆ ಮ್ಯಾಪ್ ಮಾಡಿರುವುದಾಗಲಿ.

(2) ಒಬ್ಬ ನೋಂದಾಯಿತ ವ್ಯಕ್ತಿಯು ಒಂದು ಬೆಲೆಪಟ್ಟಿಯ ಉಲ್ಲೇಖ ಸಂಖ್ಯೆಯನ್ನು ಸಾಮಾನ್ಯ ಪೋರ್ಟಲ್‌ನಿಂದ, ಸದರಿ ಪೋರ್ಟಲ್‌ನಲ್ಲಿ ಆತನಿಂದ **ನಮೂನೆ ಜಿಎಸ್‌ಟಿ ಐಎನ್‌ವಿ–1**ರಲ್ಲಿ ನೀಡಲಾದ ಒಂದು ಬೆಲೆಪಟ್ಟಿಯನ್ನು ಅಪ್‌ಲೋಡ ಮಾಡುವುದರ ಮೂಲಕ ಪಡೆಯಬಹುದು, ಮತ್ತು ಅದನ್ನು ಯುಕ್ತ ಅಧಿಕಾರಿಗೆ ಪರಿಶೀಲನೆಗಾಗಿ ಬೆಲೆಪಟ್ಟಿಗೆ ಬದಲಾಗಿ ಹಾಜರುಪಡಿಸಬಹದು ಮತ್ತು ಅಂಥ ಸಂಖ್ಯೆಯು ಅಪ್‌ಲೋಡ್ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ವರೆಗೆ ಸಿಂಧುವಾಗಿರತಕ್ಕದ್ದು.

(3) ನೋಂದಾಯಿತ ವ್ಯಕ್ತಿಯು ಉಪನಿಯಮ (1)ರ ಅಡಿಯಲ್ಲಿ ಬೆಲೆಪಟ್ಟಿಯನ್ನು ಅಪಲೋಡ್ ಮಾಡಿದ್ದಲ್ಲಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–01** ರ **ಭಾಗ–ಬಿ** ಯಲ್ಲಿನ ಮಾಹಿತಿಯು, ವಿವರಗಳನ್ನು **ನಮೂನೆ ಜಿಎಸ್‌ಟಿ ಐಎನ್‌ವಿ–1**ರಲ್ಲಿ ಒದಗಿಸಲಾದ ಮಾಹಿತಿಯ ಆಧಾರ ಮೇಲೆ ಸಾಮಾನ್ಯ ಪೋರ್ಟಲ್‌ನಲ್ಲಿ ಸ್ವಯಂ–ಜನ್ಯಗೊಳ್ಳತಕ್ಕದ್ದು.

(4) ಆಯುಕ್ತರು, ಅಧಿಸೂಚನೆಯ ಮೂಲಕ, ಸಾಗಾಣಿಕೆದಾರರ ಒಂದು ವರ್ಗವನ್ನು, ರೇಡಿಯೋ ಆವೃತ್ತಿ ಗುರುತು ಸಾಧನವನ್ನು ಪಡೆಯುವಂತೆ ಮತ್ತು ಸದರಿ ಸಾಧನವನ್ನು ಸಾಗಾಣಿಕೆ ವಾಹನಕ್ಕೆ ಅಳವಡಿಸುವಂತೆ ಮತ್ತು ಸರಕುಗಳ ಚಲನೆಗೆ ಮುನ್ನ ರೇಡಿಯೋ ಆವೃತ್ತಿ ಗುರುತು ಸಾಧನಕ್ಕೆ ಇ–ವೇ ಬಿಲ್ಲನ್ನು ಮ್ಯಾಪ್ ಮಾಡುವಂತೆ ಅಗತ್ಯಪಡಿಸಬಹುದು.

(5) ಉಪನಿಯಮ (1)ರ ಖಂಡ (ಬಿ)ಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸನ್ನಿವೇಶಗಳು ಹಾಗೆ ಅಪೇಕ್ಷಿಸಿದಲ್ಲಿ, ಆಯುಕ್ತರು, ಅಧಿಸೂಚನೆಯ ಮೂಲಕ, ಸಾಗಾಣಿಕೆ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯನ್ನು ಇ–ವೇ ಬಿಲ್ಲಿಗೆ ಬದಲಾಗಿ ಕೆಳಕಂಡವುಗಳನ್ನು ಕೊಂಡೊಯ್ಯುವಂತೆ ಅಗತ್ಯಪಡಿಸಬಹದು–

(ಎ) ತೆರಿಗೆ ಬೆಲೆಪಟ್ಟಿ ಅಥವಾ ಪೂರೈಕೆಯ ಬಿಲ್ಲು ಅಥವಾ ಪ್ರವೇಶದ ಬಿಲ್ಲು; ಅಥವಾ

(ಬಿ) ಪೂರೈಕೆಯ ರೂಪವನ್ನು ಹೊರತುಪಡಿಸಿದ ಇತರೇ ಕಾರಣಗಳಿಗಾಗಿ ಸರಕುಗಳು ಸಾಗಾಣಿಕೆಯಾಗಿದ್ದಲ್ಲಿ, ಒಂದು ಬಟವಾಡೆ ಚಲನ್.

**138ಬಿ. ದಸ್ತಾವೇಜುಗಳು ಮತ್ತು ಸಾಗಾಣಿಕೆ ವಾಹನಗಳ ಪರಿಶೀಲನೆ.–** (1) ಆಯುಕ್ತರು ಅಥವಾ ಅವರಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯು, ಎಲ್ಲಾ ಅಂತರ್–ರಾಜ್ಯ ಮತ್ತು ರಾಜ್ಯದೊಳಗಿನ ಸರಕುಗಳ ಚಲನೆಗಾಗಿ ಭೌತಿಕ ರೂಪದಲ್ಲಿರುವ ಇ–ವೇ ಬಿಲ್ಲು ಅಥವಾ ಇ–ವೇ ಬಿಲ್ಲಿನ ಸಂಖ್ಯೆಯನ್ನು ಪರಿಶೀಲಿಸುವುದಕ್ಕಾಗಿ ಯಾವುದೇ ಸಾಗಾಣಿಕೆ ವಾಹನವನ್ನು ತಡೆಯಲು ಯುಕ್ತ ಅಧಿಕಾರಿಯನ್ನು ಪ್ರಾದಿಕೃತಗೊಳಿಸಬಹುದು.

(2) ಸರಕುಗಳ ಚಲನೆ ಪರಿಶೀಲನೆಯನ್ನು ನಡೆಸುವುದು ಅಗತ್ಯವಿರುವ ಸ್ಥಳಗಳಲ್ಲಿ, ಆಯುಕ್ತರು ರೇಡಿಯೋ ಆವೃತ್ತಿ ಗುರುತು ಸಾಧನದ ರೀಡರ್‌ಗಳನ್ನು ಅನುಸ್ಥಾಪಿಸತಕ್ಕದ್ದು ಮತ್ತು ಸದರಿ ಸಾಧನದೊಂದಿಗೆ ಇ–ವೇ ಬಿಲ್ಲನ್ನು ಮ್ಯಾಪ್ ಮಾಡಲಾಗಿದ್ದಲ್ಲಿ, ಅಂಥ ಸಾಧನ ರೀಡರ್‌ಗಳ ಮೂಲಕ ವಾಹನಗಳ ಚಲನೆಯ ಪರಿಶೀಲನೆಯನ್ನು ಮಾಡತಕ್ಕದ್ದು.

(3) ಸಾಗಾಣಿಕೆ ವಾಹನಗಳ ಭೌತಿಕ ತಪಾಸಣೆಯನ್ನು ಆಯಕ್ತರಿಂದ ಅಥವಾ ಅವರಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯಿಂದ ಪ್ರಾದಿಕೃತನಾದ ಯುಕ್ತ ಅಧಿಕಾರಿಯಿಂದ ನಡೆಸತಕ್ಕದ್ದು.

ಪರಂತು, ತೆರಿಗೆ ತಪ್ಪಿಸುವಿಕೆಯ ನಿರ್ದಿಷ್ಟ ಮಾಹಿತಿಯ ಸ್ವೀಕೃತಿಯ ಮೇರೆಗೆ, ಆಯಕ್ತರಿಂದ ಅಥವಾ ಅವರಿಂದ ಈ ಸಂಬಂಧದಲ್ಲಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯಿಂದ ಅಗತ್ಯವಿರುವ ಅನುಮೋಧನೆಯನ್ನು ಪಡೆದ ನಂತರ, ಯಾವುದೇ ಅಧಿಕಾರಿಯು, ಒಂದು ನಿರ್ದಿಷ್ಟ ಸಾಗಾಣಿಕೆ ವಾಹನದ ಭೌತಿಕ ಪರಿಶೀಲನೆಯನ್ನು ಸಹ ನಡೆಸಬಹುದು.

**138ಸಿ. ಸರಕುಗಳ ತಪಾಸಣೆ ಮತ್ತು ಪರಿಶೀಲನೆ.–** (1) ಸಂಚಾರದಲ್ಲಿರುವ ಸರಕುಗಳ ಪ್ರತಿಯೊಂದು ತಪಾಸಣೆಯ ಸಾರಾಂಶದ ವರದಿಯನ್ನು, ಯುಕ್ತ ಅಧಿಕಾರಿಯು, ತಪಾಸಣೆಯ ಇಪ್ಪತ್ನಾಲ್ಕು ಗಂಟೆಯ ಒಳಗಾಗಿ, **ನಮೂನೆ ಜಿಎಸ್‌ಟಿ ಇಡಬ್ಲೂಬಿ–03** ರ **ಭಾಗ–ಎಯಲ್ಲಿ** ಆನ್‌ಲೈನ್‌ನಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅಂಥ ತಪಾಸಣೆಯ ಮೂರು ದಿನಗಳ ಒಳಗಾಗಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–03** ರ **ಭಾಗ–ಬಿಯಲ್ಲಿ** ಅಂತಿಮ ವರದಿಯನ್ನು ದಾಖಲು ಮಾಡತಕ್ಕದ್ದು.

(2) ಯಾವುದೇ ಸಾಗಾಣಿಕೆ ವಾಹನವನ್ನು ಸಾಗಾಣಿಕೆಯಲ್ಲಿರುವಾಗ ಸರಕುಗಳ ಭೌತಿಕ ಪರಿಶೀಲನೆಯನ್ನು ರಾಜ್ಯದ ಒಳಗೆ ಅಥವಾ ಯಾವುದೇ ಇತರೇ ರಾಜ್ಯದ ಒಂದು ಸ್ಥಳದಲ್ಲಿ ಮಾಡಲಾಗಿದ್ದಲ್ಲಿ, ರಾಜ್ಯದಲ್ಲಿ ಪುನಃ ಸದರಿ ಸಾಗಾಣಿಕೆ ವಾಹನದ ಮುಂದಿನ ಭೌತಿಕ ತಪಾಸಣೆಯನ್ನು, ತರುವಾಯವಾಗಿ ತೆರಿಗೆ ತಪ್ಪಿಸುವಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾಹಿತಿ ಲಭ್ಯವಾಗಿರುವುದನ್ನು ಹೊರತುಪಡಿಸಿದಂತೆ ನಡೆಸತಕ್ಕದ್ದಲ್ಲ.

**138ಡಿ. ವಾಹನದ ತಡೆಹಿಡಿಯುವಿಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಅಪ್‌ಲೋಡ್ ಮಾಡುವ ಸೌಲಭ್ಯ.–** ಒಂದು ವಾಹನವನ್ನು ಮೂವತ್ತು ನಿಮಿಷಗಳನ್ನು ಮೀರಿದ ಒಂದು ಅವಧಿಗಾಗಿ ಅಡ್ಡಹಾಕಿ ಮತ್ತು ತಡೆಹಿಡಿಯಲಾಗಿದ್ದಲ್ಲಿ, ಸಾಗಾಣಿಕೆದಾರನು, ಸದರಿ ಮಾಹಿತಿಯನ್ನು ಸಾಮಾನ್ಯ ಪೋರ್ಟಲ್‌ನಲ್ಲಿ **ನಮೂನೆ ಜಿಎಸ್‌ಟಿ ಇಡಬ್ಲೂಬಿ–04**ರಲ್ಲಿ ಅಪ್‌ಲೋಡ್ ಮಾಡಬಹುದು.]